

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 06 Issue : 248 Sunday 09-06-2024 E-mail : maruti.b.hosamani76@gmail.com Page: 4 Price : Rs. 1/-


## ಶಿಕ್ಷಣ ದೇಶದ ದೊಡ್ಡ ಸಂಪತ್ತು: ಶ್ರೀ ಶ್ರೀ ಜಯ ಬಸವಕುಮಾರ ಮಹಾಸ್ವಾಮಿ ಅಭಿಪ್ರಾಯ



**ಕೂಡ್ಲಿಗಿ :** ಆಸ್ತಿಗಳಿಸುವ ಮೊದಲು ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ. ಶಿಕ್ಷಣ ದೇಶದ ಅತಿದೊಡ್ಡ ಸಂಪತ್ತಾಗಿದೆ ಶಿಕ್ಷಣ ದಿಂದ ಪಡೆದ ಜ್ಞಾನಶಾಶ್ವತಎಂದುವಿಜಯಪುರ ಹಾಗೂ ಚಿತ್ರದುರ್ಗ ಗಾಣಿಗ ಗುರುಪೀಠದ ಸ್ವಾಮೀಜಿಗಳಾದ ಡಾ. ಜಯಬಸವ ಕುಮಾರ ಸ್ವಾಮೀಜಿ ಅಭಿಪ್ರಾಯ ವ್ಯಕ್ತಪಡಿಸಿದರು.

ಅವರು ತಾಲೂಕಿನ ಹೊಸಹಳ್ಳಿ ಗ್ರಾಮದ ಗಾಣಿಗರ ಕಲ್ಯಾಣ ಮಂಟಪದಲ್ಲಿ ನಡೆದ ಕೂಡ್ಲಿಗಿ ತಾಲೂಕು ಗಾಣಿಗರ ಸಂಘ ದಿಂದ ಆಯೋಜಿಸಿದ್ದ ಲಿಂಗೈಕ್ಯ ಶ್ರೀ ಶ್ರೀ ಪರಮ ಪೂಜ್ಯ ಜಯದೇವ ಜಗದ್ಗುರುಗಳ ಪುಣ್ಯ ಸ್ಮರಣೆ ಹಾಗೂ ಗಾಣಿಗರ ಸಮುದಾಯದ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡುತ್ತಾ ಶಿಕ್ಷಣದ ಜೊತೆಗೆ ಸಂಸ್ಕಾರ, ಸಂಸ್ಕೃತಿ, ಮುಖ್ಯ, ಕಾಯಕ, ಶಿಕ್ಷಣ, ದಾಸೋಹ, ಮಹತ್ವವನ್ನು ತಿಳಿಸಿದರು, ವಿದ್ಯಾಭ್ಯಾಸದಲ್ಲಿ ಜೆ ಡಬ್ಲ್ಯೂ ಇ.ಮೆನ್ಸ್,ನೀಟ್ ಅಂತಹ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹೆಚ್ಚು ಹೆಚ್ಚು ಭಾಗವಹಿಸುವುದರಿಂದ ಜ್ಞಾನಾರ್ಜನೆ ಉಂಟಾಗುತ್ತದೆ. ಜೊತೆಗೆ ಉನ್ನತ ಹುದ್ದೆಗೇರಲು ಸಹಾಯವಾಗುತ್ತದೆ. ಉನ್ನತ ಹುದ್ದೆ ಸೇರಿದಾಗ ಸಮಾಜಕ್ಕೆ ತನ್ನದೇ ಆದ ಕೊಡುಗೆಯನ್ನು ಕೊಡಬೇಕು ಎಂದು ತಿಳಿಸಿದರು, ಸಂಘದ ಅಧ್ಯಕ್ಷರಾದ ಎಸ್ ಶೇಖರಪ್ಪ ಮಾತನಾಡಿ ಗಾಣಿಗ ಸಮುದಾಯದ ವಿದ್ಯಾರ್ಥಿಗಳು ಪ್ರತಿಭಾವಂತರಾಗುವುದರ ಜೊತೆಗೆ ತಂದೆ ತಾಯಿಗೆ ಊರಿಗೆ ಗೌರವತರುವಂತಕೆಲಸನೀವೆಲ್ಲರೂ ಮಾಡಬೇಕು ಎಂದರು. ಎ ಎಸ್ ಕೊಟ್ರಣ್ಣ ಮಾತನಾಡಿ ಗಾಣಿಗ ಸಮುದಾಯದ ಭವನ ನಡೆದು ಬಂದ ದಾರಿಯ ಕುರಿತು ಸ್ವ ವಿವರವಾಗಿ ತಿಳಿಸಿದರು. ಸೈಟ್ ಬಾಬಣ್ಣ ಮಾತನಾಡಿ ಗಾಣಿಗ ಸಮುದಾಯದ ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಉನ್ನತ ಹುದ್ದೆಗಳನ್ನು ಸೇರಿ ಸಮಾಜಕ್ಕೆ ತನ್ನದೇ ಆದ ಕೊಡುಗೆಗಳನ್ನು ಕೊಡಬೇಕು ಎಂದರು. ಗಾಣಿಗ ಸಮುದಾಯದ ಪೀಠದ ಜಗದ್ಗುರು ಡಾ. ಜಯ ಬಸವಕುಮಾರಸ್ವಾಮೀಜಿಸಾನಿಧ್ಯ ವಹಿಸಿದ್ದು. ಗಾಣಿಗರ ಸಂಘದ ತಾಲೂಕು ಅಧ್ಯಕ್ಷರಾದ ಎಸ್ ಶೇಖರಪ್ಪ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿಯಾದ ಕೊಟೆ-ಣ್ಣ. ಗಾಣಿಗ ಸಮುದಾಯದ ಮುಖಂಡರಾದ ದಿನ್ನೆ ಮಲ್ಲಿಕಾರ್ಜುನ.ಜೆಸಿಧನಂಜಯ. ಗೌರವಾಧ್ಯಕ್ಷರಾದಟಿರೇಚಣ್ಣ,ಸಣ್ಣ ವೀರಣ್ಣ ಹಾರಕಬಾವಿ ಹುಡೇ ಚಂದ್ರಣ್ಣ. ಕೊಟ್ರಣ್ಣ. ಕಾಮ ಶೆಟ್ಟಿ ಬಸವರಾಜ್.ನಿವೃತ್ತಿ ಕಂದಾಯ ಅಧಿಕಾರಿ ಯಜಮಾನಪ್ಪ. ಮಲ್ಲಪ್ಪ ಸಾಹುಕಾರ್, ಎರಿಸ್ವಾಮಿ ಮಹದೇವಪುರ,ಹುರುಳಿ ಹಾಳ್ ಬಸವೇಶ್ವರ. ಬಣವಿಕಲ್ ಶಿವಕುಮಾರ್.ಜಿ ಎಸ್. ಗಿರೀಶ್ ಕೂಡ್ಲಿಗಿ,ಹಾರಕಬಾವಿ ಕೊಟ್ರೇಶ್, ಚಿರತೆ ಗುಂಡು ಈಶ್ವರಪ್ಪ. ಕಾಮಶೆಟ್ಟಿ ವೀರ ಭದ್ರಪ್ಪ . ಆಲೂರು ಮಲ್ಲಿಕಾರ್ಜುನ. ಆಲೂರು ಗುರುಮೂರ್ತಿ, ವರವಿನ ಚನ್ನಬಸಪ್ಪ, ಡಿ ಶಶಿಧರ. ಹರಕಬಾವಿ ಯಶವಂತ, ಟಿ.ಕೆ. ಸಿದ್ದರಾಮೇಶ್, ಹರ್ಷ ಮೆಡಿಕಲ್ ಸ್ಟೋರ್‌ಮಂಜುನಾಥ್‌ಸೇರಿದಂತೆ ತಾಲೂಕಿನ ಎಲ್ಲಾ ಗಾಣಿಗ ಸಮುದಾಯದ ಮುಖಂಡರು ಹಿರಿಯರು ಸೇರಿದಂತೆ ಎಲ್ಲಾ ಸಮುದಾಯದ ಮುಖಂಡರು ಸಾರ್ವಜನಿಕರು ಇತರರು ಉಪಸ್ಥಿತರಿದ್ದರು.

**ಹೋಬಳಿ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಕೆ.ಎಸ್.ವೀರೇಶ್. ಕಾನಾ ಹೊಸಹಳ್ಳಿ**

## ಡಾ. ಪ್ರಭು ಗಂಜಿಹಾಳ ಪ್ರಾಚಾರ್ಯರಾಗಿ ಅಧಿಕಾರ ಸ್ವೀಕಾರ



**ಹೊಳೆ ಆಲೂರು :** ರೋಣ ತಾಲೂಕಿನ ಹೊಳೆ ಆಲೂರಿನ ಶ್ರೀ ಕಲ್ಮೇಶ್ವರ ವಿದ್ಯಾ ಪ್ರಸಾರಕ ಸಮಿತಿಯ ಕಲಾ, ವಿಜ್ಞಾನ, ವಾಣಿಜ್ಯ, ಪದವಿ ಮಹಾ ವಿದ್ಯಾಲಯ ಹಾಗೂ ಕನ್ನಡ ಸ್ನಾತಕೋತ್ತರ ಕೇಂದ್ರದ ನೂತನ ಪ್ರಾಚಾರ್ಯರಾಗಿ ಡಾ.ಪ್ರಭು ಗಂಜಿಹಾಳ ಅಧಿಕಾರ ವಹಿಸಿ ಕೊಂಡರು.

ಕಳೆದ ಮೂವತ್ಮೂರು ವರ್ಷಗಳಿಂದ ಕನ್ನಡ ವಿಷಯದ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ, ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿ ಪ್ರಾಚಾರ್ಯರ ಹುದ್ದೆ ಅಲಂಕರಿಸಿರುವ ಡಾ.ಪ್ರಭು ಗಂಜಿಹಾಳ ಅವರಿಗೆ ಮಹಾ ವಿದ್ಯಾಲಯದ ವತಿಯಿಂದ ಸನ್ಮಾನಿಸಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಬಿ.ಸಿ.ಪಾಟೀಲ, ಗೌರವ ಕಾರ್ಯದರ್ಶಿ ಎಂ.ಎನ್.ತೇ-ಜಿಗೌಡ್ರ ಮತ್ತು ಆಡಳಿತ ಮಂಡಳಿ ಸದಸ್ಯರು ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಡಾ.ಎಸ್.ಬಿ.ಸಜ್ಜನರ್, ಪ್ರೊ.ಎನ್. ಆರ್. ಹಿರೇಸಕ್ಕರಗೌಡ್ರ, ಪ್ರೊ.ಎಸ್. ವಾಯ್.ಪೂಜಾರ, ಡಾ.ಕುಮಾರ ಹಂಜಗಿ, ಪ್ರಾಧ್ಯಾಪಕರಾದ ವಿ.ಪಿ.ಪಾಟೀಲ, ಎಂ.ಎಸ್. ಬೇವೂರ, ಶ್ರೀಮತಿ ರೇಶ್ಮಾ ಟಕ್ಕೇದ, ಶ್ರೀಮತಿ ಜಿ.ಎಂ.ಪೊಲೀಸ್ಪಾಟೀಲ, ಎಸ್.ಬಿ. ಹಳ್ಳೂರ, ವಿ.ಬಿ.ಜಾಲಿಹಾಳ, ವಿ. ಎಸ್. ಕಪ್ಪಲಿ, ಆನಂದ ಕೆಂಚನಗೌಡರ, ಕೆ.ಎ.ಕೊಪ್ಪದ, ಶಿಲ್ಪ ಮೆದನಾಪೂರ, ಶ್ರೀ ಎಸ್.ಜಿ.ಮಾಳವಾಡ ಬೋಧಕ-ಬೋಧಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಎ.ಎಸ್.ಎಸ್.ಕೆ ಸಂಸ್ಥಾಪಕ ಅಧ್ಯಕ್ಷರು ಆದ ಡಾ. ಕೆ.ಎಂ. ಸಂದೇಶ್ ರವರು ಹಿರೇಹಳ್ಳಿ ಗ್ರಾಮಕ್ಕೆ ಭೇಟಿ



**ಹಿರೇಹಳ್ಳಿ :** ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ತಳಕು ಹೋಬಳಿ ಹಿರೇಹಳ್ಳಿ ಗ್ರಾಮದಲ್ಲಿ ನಾಳೆ ಡಾ.ಬಿ.ಆರ್ ಅಂಬೇಡ್ಕರ್ ರವರ 133 ನೇಯ ಜಯಂತಿಯ ಆಚರಣೆಯ ಪ್ರಯುಕ್ತ ದಲಿತರ ಆಶಾ ಕಿರಣ, ಬಡವರ ಬಂಧು, ದಲಿತರ ಕಣ್ಮಣಿ, ನೊಂದ ಜೀವಗಳ ಬೆಳಕು, ರಾಜ್ಯ ದಲಿತ ಹೋರಾಟಗಾರರು ಹಾಗೂ ದ ರೊಲರ್ಸ್ ಚಿತ್ರದ ನಾಯಕ ನಟರಾದ ಡಾ.ಕೆ.ಎಂ.ಸಂದೇಶ್ ರವರು ಈ ಅಂಬೇಡ್ಕರ್ ಜಯಂತಿ ಉತ್ಸವದಲ್ಲಿ ಪಾಲ್ಗೊಳ್ಳುತ್ತಿರುವುದು ಚಿತ್ರದುರ್ಗ ಜಿಲ್ಲೆಯ ಎಲ್ಲಾ ದಲಿತ ಸಂಘಟನೆಗಳಿಗೆ ಮತ್ತು ಯುವಕರಿಗೆ ಅವರ ಅಭಿಮಾನಿಗಳಿಗೆ ಅತ್ಯಂತ ಸಂತಸ ತಂದಿದೆ.

ಮಹಾ ನಾಯಕ ಸಂವಿಧಾನ ಶಿಲ್ಪಿ ಡಾ|| ಬಿ.ಆರ್ ಅಂಬೇಡ್ಕರ್ ಯುವಕ ಸಂಘ, ಕೋಡಿಹಳ್ಳಿ, ಹಾಗೂ ಹಿರೇಹಳ್ಳಿ ಗ್ರಾಮದ ಅಂಬೇಡ್ಕರ್ ಯುವಕ ಸಂಘದ, ಎಲ್ಲಾ ಪದಾಧಿಕಾರಿಗಳು ಸದಸ್ಯರು,ಯುವಕರು, ಯಜಮಾನರು, ಸಮಸ್ತ ನಾಗರಿಕ ಬಂಧುಗಳು ಈ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ನೆರವೇರಲಿ ಎಂದು ಹೃದಯಪೂರ್ವಕವಾಗಿ ಶುಭ ಹಾರೈಸಿದ್ದಾರೆ.

**ವರದಿ: ಕೋಡಿಹಳ್ಳಿ ಶಿವಮೂರ್ತಿ.ಟಿ ಚಿತ್ರದುರ್ಗ.**

## ಆಕಸ್ಮಿಕವಾಗಿ ಕಾಲು ಜಾರಿ ಬಿದ್ದಿರುವ (ಮೇಕೆ) ಆಡನ್ನು ರಕ್ಷಿಸಿದ ಅಗ್ನಿಶಾಮಕ ದಳದ ಸಿಬ್ಬಂದಿಯವರು



**ಅಥಣಿ :** ಅಥಣಿ ಪಟ್ಟಣದ ವಿಕ್ರಮಪುರ ಬಡಾವಣೆಯಲ್ಲಿ ಶ್ರೀ.ಮುರಗೇಶ ನಿಂಗನೂರ ರವರ ಮೇಕೆ (ಆಡು) ಸೇದು ಬಾವಿಯಲ್ಲಿ ಅಂದಾಜು 50ಥ55 ಅಡಿ ವಿಸ್ತಾರವಾದ 50 ರಿಂದ 55 ಅಡಿ ಆಳದಲ್ಲಿ 05 ಅಡಿ ಆಳದ ತೇರೆದ ನೀರಿರುವ ಭಾವಿ ಆಕಸ್ಮಿಕವಾಗಿ ಕಾಲು ಜಾರಿ ಮೇಕೆ (ಆಡು) ಬಿದ್ದಿದ್ದು, ಸದರಿಸ್ಥಳೀಯನಿವಾಸಿಗಳುಘಟನೆಯವಿಷಯವನ್ನು ಅಥಣಿ ಅಗ್ನಿಶಾಮಕ ಠಾಣೆ ದೂರವಾಣಿ ಕರೆ ಮಾಡಿ ತಿಳಿಸಿದರು, ಕರೆ ಬಂದ ತಕ್ಷಣ ಜಲ ವಾಹನದೊಂದಿಗೆ ಅಗ್ನಿಶಾಮಕ ತಂಡ ಸ್ಥಳಕ್ಕೆ ದೌಡಾಯಿಸಿ ಕಾರ್ಯ ಪ್ರವೃತ್ತರಾಗಿ ಸುಮಾರು 50 ರಿಂದ 55 ಅಡಿ ಆಳದ ಸೇದು ಬಾವಿಯಲ್ಲಿ ಹಗ್ಗಗಳ ಸಹಾಯದಿಂದ ಕೆಳಗಿಳಿದು ಸುಮಾರು 01:40 ಒಂದು ಘಂಟೆ ನಲವತ್ತು ನಿಮಿಷಗಳ ಕಾಲ ಶ್ರಮವಹಿಸಿ ಸಿಬ್ಬಂದಿಗಳು ಪ್ರಾಣ ರಕ್ಷಣೆಗಾಗಿ ರೋಧಿಸುತ್ತಿದ್ದ ಮೇಕೆಯನ್ನು ಜೀವಂತವಾಗಿ ಅಗ್ನಿಶಾಮಕ ಇಲಾಖೆಯ ತಂಡ ರಕ್ಷಣೆ ಮಾಡಿರುತ್ತಾರೆ. ಈ ಸಮಯ ಪ್ರಜ್ಞೆ ಕಾರ್ಯವನ್ನು ವೀಕ್ಷಿಸಿದ ವಿಕ್ರಮಪುರ ಬಡಾವನೆಯಲ್ಲಿಯ ಸ್ಥಳೀಯ ನಿವಾಸಿಗಳು ಅಗ್ನಿಶಾಮಕ ತಂಡದ ಕಾರ್ಯ ದಕ್ಷತೆಯನ್ನು ಮೆಚ್ಚಿ ಶ್ಲಾಘಿಸಿ ಹಾಗೂ ಹಸ್ತಲಾಘವ ಮಾಡಿ ಮೇಕೆ (ಆಡು)ಪ್ರಾಣ ರಕ್ಷಣೆ ಮಾಡಿದ್ದಕ್ಕಾಗಿ ಅಭಿನಂದನೆ ಸಲ್ಲಿಸಿದರು.

ಅಗ್ನಿಶಾಮಕ ತಂಡದಲ್ಲಿ ಪ್ರಭಾರ ಅಗ್ನಿಶಾಮಕ ಠಾಣಾಧಿಕಾರಿ ರವರಾದ ಮಲ್ಲಿಕಾರ್ಜುನ ಬಂದಾಳ,ರವರ ನೇತ್ರತ್ವದಲ್ಲಿ , ನಿಲಪ್ಪ ಹೆರವಾಡೆ,ಮಲ್ಲನಗೌಡ ನಾಯಕ, ರವೀಂದ್ರ ಸಂಗಮ,ಕಲ್ಮೇಶ್ ಚಿಮ್ಮಡ,ಸಂತೋಷ ಚೌಗಲಾ, ಮಲ್ಲಪ್ಪ ಬಟಕುರ್ಕಿ, ಭಾಗವಹಿಸಿದ್ದರು.

## ಐಎಎಸ್-ಐಪಿಎಸ್ ಲೋಕಾಯುಕ್ತ ಅಧಿಕಾರಿಗಳಿಗ ಆದೇಶಕ್ಕೂ ಬೆಲೆ ಕೊಡದ ಕಂಪ್ಲಿಯ ಸರ್ಕಾರಿ ಅಧಿಕಾರಿಗಳು



**ಬಳ್ಳಾರಿ :** ತಾಲೂಕಾ ಕಚೇರಿ ಸಭಾಂಗಣದಲ್ಲಿ ಬಳ್ಳಾರಿ ಲೋಕಾಯುಕ್ತ ರಿಂದ ಗುರುವಾರ ಸಾರ್ವಜನಿಕ ಅಹವಾಲು ಸ್ವೀಕಾರ ಕಾರ್ಯಕ್ರಮ ನಡೆಯಿತು. ಬಳ್ಳಾರಿ ಲೋಕಾಯುಕ್ತ ನಿರೀಕ್ಷಕ ಮೊಮ್ಮದ್ ರಫಿ ಮಾತನಾಡಿ ಮೊಹರಂ ಹಬ್ಬದ ಅಲಾಯಿ ಕುಣಿತಕ್ಕೆ ಹಾಗೂ ಇನ್ನಿತರೆ ಕೆಲಸಕ್ಕೆ ಮರ ಗಿಡಗಳನ್ನು ಕಡಿಯಬಾರದು ಅಂತವರ ವಿರುದ್ಧ ಕ್ರಮ ಕೈಗೊಳ್ಳಬೇಕು ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗುವುದು ಎಂದರು ಮತ್ತು ಅರಣ್ಯ ಇಲಾಖೆ ಅಧಿಕಾರಿಗಳು ಆಸಕ್ತಿವಹಿಸಿ ಕಾರ್ಯ ನಿರ್ವಹಿಸಿದರೆ ಪರಿಸರ ಉಳಿಸಲು ಸಾಧ್ಯ ರಸ್ತೆ ಬದಿ ಮರ ಗಿಡಗಳನ್ನು ಬೆಳೆಸಬೇಕು ಪಟ್ಟಣದಲ್ಲಿ ಅರಣ್ಯ ಇಲಾಖೆಯಿಂದ ಪರಿಸರ ದಿನ ಆಚರಿಸುವಲ್ಲಿ ಇಚ್ಛಾ ಶಕ್ತಿ ತೋರಿಲ್ಲ ಎಂದು ಸಭೆಯಲ್ಲಿ ಹಾಜರಿದ್ದ ಅರಣ್ಯ ಇಲಾಖೆ ಅಧಿಕಾರಿಗಳನ್ನು ತರಾಟೆಗೆ ತೆಗೆದು ಕೊಂಡರು ಸಭೆಯಲ್ಲಿ ಸಾರ್ವಜನಿಕರಿಂದ ಯಾವುದೇ ಅರ್ಜಿಗಳು ಸ್ವೀಕಾರ ಗೊಳ್ಳಲಿಲ್ಲ ಬಾಕಿ ಇದ್ದ ಅಳೆಯ ಅರ್ಜಿಗಳ ಅನುಪಾಲನೆ ಕುರಿತು ಚರ್ಚಿಸಲಾಯಿತು ಸೋಮಪ್ಪ ಕೆರೆ ಒತ್ತುವರಿ, ಗೌರಮ್ಮ ಕೆರೆ, ಗ್ಯಾಸ್ ಗೋಡೌನ್ ಸ್ಥಳಾಂತರ, ಕರ್ನಾಟಕ ಉಗ್ರಾಣ ನಿಗಮ ನಿಯಮಿತ ಕಂಪ್ಲಿ ಸಿಬ್ಬಂದಿಯ ಎಂಟು ತಿಂಗಳ ಸಂಬಳ ಬಾಕಿ, ಮತ್ತು ಕೆಲಸಕ್ಕೆ ಸೇರಿಸಿ ಕೊಳ್ಳುವ ವಿಷಯ, ಹರ್ಬಲ್ ಲೈಫ್ ನ್ಯೂಟ್ರಿಷನ್ ಜೈನ್ ಲಿಂಕ್ ಸಿಸ್ಟಮ್ ಅನಧಿಕೃತ ಪರವಾನಿಗೆ ನೀಡಿದ, ಪುರಸಭೆ ಸಿಬ್ಬಂದಿ, ಅನಧಿಕೃತ ಕಟ್ಟಡಗಳ ಚಾಲ್ತಿ ಬಗ್ಗೆ ಕರ್ನಾಟಕ ರಾಜ್ಯ ಮಾಹಿತಿ ಹಕ್ಕು ಮತ್ತು ಸಾಮಾಜಿಕ ಕಾರ್ಯಕರ್ತರ ವೇದಿಕೆಯ ಬಳ್ಳಾರಿ ಜಿಲ್ಲಾ ಘಟಕ ಹಾಗೂ ಅಧ್ಯಕ್ಷರಾದ ಟಿ ಎಚ್ ಎಂ ರಾಜಕುಮಾರ್ ಮತ್ತು ಕಂಪ್ಲಿ ತಾಲೂಕು ಘಟಕದ ಅಧ್ಯಕ್ಷ ಎಚ್ ಗೋಪಾಲ್ ಕಾರ್ಯದರ್ಶಿಯಾದ ಗೋಪಿನಾಥ್ ಇವರು ದಿನಾಂಕ 08-12-2023 ರಂದು ಲೋಕಾಯುಕ್ತರಿಗೆ ದೂರು ನೀಡಿದ್ದರು ಈ ಅರ್ಜಿಗಳ ಅನು ಪಾಲನೆ ಕುರಿತು ಚರ್ಚಿಸಲಾಯಿತು ತಹಸಿಲ್ದಾರ್ ಶಿವರಾಜ್. ತಾಲೂಕ್ ಪಂಚಾಯತಿ ಇ ಓ ಆರ್ ಕೆ ಶ್ರೀಕುಮಾರ್. ಪೊಲೀಸ್ ಇನ್ಸ್ಪೆಕ್ಟರ್ ಪ್ರಕಾಶ್ ಮಾಳಿ ಉಪಸ್ಥಿತಿಯಲ್ಲಿ ಸಾರ್ವಜನಿಕ ಕುಂದು ಕೊರತೆ ಕಾರ್ಯಕ್ರಮ ನಡೆಯಿತು.

**ಜಿಲ್ಲಾ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಟಿ.ಎಚ್.ಎಂ ರಾಜಕುಮಾರ್. ಬಳ್ಳಾರಿ.**

## ಕಂದಗಲ್ಲು ಮುರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ

**ಕಂದಗಲ್ಲು :** ವಿಜಯನಗರ ಜಿಲ್ಲೆ ಕೊಟ್ಟೂರು ತಾಲೂಕಿನ ಕಂದಗಲ್ಲು ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಕಾಲೇಜ್ ನಲ್ಲಿ ದಿನಾಂಕ 5 ಜೂನ್ ವಿಶ್ವ ಪರಿಸರ ದಿನಾಚರಣೆಯನ್ನು ಗಿಡ ನೆಡುವುದರ ಮೂಲಕ ಆಚರಣೆ ಮಾಡಿದರು. ಈ ಶಾಲೆಯಲ್ಲಿ ಉತ್ತಮವಾದ ಪರಿಸರ ಅಂದರೆ ವಿಧ ವಿಧದ ತಳಿಯ ಗಿಡ ಮರಗಳು ಸುಂದರವಾದ ಕಟ್ಟಡಗಳು, ಶಾಲಾ ಸುತ್ತಲೂ ಕಾಂಪೌಂಡ್, ಒಳಗಡೆ ಶಾಲಾ ಆವರಣ ಉತ್ತಮವಾದ ಹುಲ್ಲಿನ ಹಾಸಿಗೆ, ಸಾಲು ಸಾಲಾಗಿ ನಿಂತಿರುವ ಗಿಡ ಮರಗಳು, ಆಟದ ಮೈದಾನಗಳು ಒಟ್ಟಿನಲ್ಲಿ ಹೇಳುವುದಾದರೆ ವಿದ್ಯಾರ್ಥಿಗಳಿಗೆ ಉತ್ತಮವಾದ ಪರಿಸರವನ್ನು ಹೊಂದಿರುವ ಶಾಲೆ ಇದಾಗಿದೆ. ಅಲ್ಲದೆ ಈ ಶಾಲೆಯಲ್ಲಿ ಓದಿದ ಮಕ್ಕಳು ಫಲಿತಾಂಶವು ಅತ್ಯುತ್ತಮ ಅಂದರೆ ಚೇತನ್ ಜಿ ಯವರು 625 ಕ್ಕೆ 612 ಅಂಕಗಳನ್ನು ಪಡೆದು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದು ಅಲ್ಲದೆ ನಾಗವೇಣಿ ಮತ್ತು ಪ್ರಜ್ವಲ್ 625 ಕ್ಕೆ 611 ಅಂಕ ಗಳಿಸುವುದರ ಮೂಲಕ ಇಲ್ಲಿನ ಪರಿಸರ ಹಾಗೂ ಶಿಕ್ಷಣ ಮತ್ತು ಶಿಕ್ಷಕರ ಬಗ್ಗೆ ಗುಣಮಟ್ಟವನ್ನು ತಿಳಿಯಬಹುದು.

ಮುರಾರ್ಜಿ ದೇಸಾಯಿ ವಸತಿ ಶಾಲೆ ಕಂದಗಲ್ಲು 2023-24 ನೇ. ಸಾಲಿನ ಫಲಿತಾಂಶದ ಪರ್ಸೆಂಟೇಜ್ 91.12% ಅಂದರೆ ಒಟ್ಟು ಎಸ್ ಎಸ್ ಎಲ್ ಸಿ 43 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ 24 ಫಸ್ಟ್ ಕ್ಲಾಸ್ 27 ಸೆಕೆಂಡ್ ಕ್ಲಾಸ್ 2 ವಿದ್ಯಾರ್ಥಿಗಳು ಎಸ್ ಎಸ್ ಎಲ್ ಸಿ ಯ ಸಂಪೂರ್ಣ ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶಾಲೆಗೂ ಹಾಗೂ ತಂದೆ ತಾಯಿಗಳಿಗೂ ಕೀರ್ತಿ ತಂದು ಕೊಟ್ಟಿರುವುದು ಸಂತೋಷವಾಗಿದೆ ಎಂದು ಶಾಲೆಯ ಪ್ರಾಂಶುಪಾಲರು ಮತ್ತು ನಿಲಯ ಪಾಲಕರು ಹೇಳಿದರು.

ಮುರಾರ್ಜಿ ದೇಸಾಯಿ ವಸತಿ ವಿಜ್ಞಾನ ಪದವಿ ಪೂರ್ವ ಕಾಲೇಜ್ ಕಂದಗಲ್ಲು ವಿದ್ಯಾರ್ಥಿಗಳು 600 ಕ್ಕೆ 569 ಪ್ರಥಮ ಸ್ಥಾನ ಕವಡಿ ಮಂಜುನಾಥ್ ದ್ವಿತೀಯ ಸ್ಥಾನ 600 ಕ್ಕೆ 567 ಅರ್ಜುನ ಎಲ್ ಪಡೆದು ಕೊಂಡು ಒಟ್ಟು 74 ವಿದ್ಯಾರ್ಥಿಗಳಲ್ಲಿ 22 ಡಿಸ್ಟಿಂಕ್ಷನ್ 47 ಪ್ರಥಮ ಸ್ಥಾನ 3 ದ್ವಿತೀಯ ಸ್ಥಾನ ಎರಡು ತೃತೀಯ ಸ್ಥಾನ ಪಡೆದುಕೊಂಡು ಕಾಲೇಜಿಗೂ ಹಾಗೂ ತಂದೆ ತಾಯಿಗಳಿಗೂ ಕೀರ್ತಿ ತಂದು ಕೊಟ್ಟಿರುವುದು ಸಂತೋಷವಾಗಿದೆ ಎಂದು ಕೊಟ್ರೇಶ್ ಉಪನ್ಯಾಸಕರು ಹೇಳಿದರು. ಈ ಸಂದರ್ಭದಲ್ಲಿ ಶಿವಕುಮಾರ್ ಎಸ್ ಸಿ ಪ್ರಾಂಶುಪಾಲರು ಸುರೇಶ್ ಎವಿ ನಾಗರಾಜ್ ಎಸ್ ದೈಹಿಕ ಶಿಕ್ಷಕರು ಮಾರಣ್ಣ ಬಿ ಎಸ್ ನಿಲಯ ಪಾಲಕರು ರವಿ ಕ್ಲರ್ಕ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಪ್ರದೀಪ್. ಕುಮಾರ್ ಸಿ. ಕೊಟ್ಟೂರು**

## ಪಾಲಕರ ಶ್ರಮ ಮಹತ್ತರವಾದುದು



**ರಬಕವಿ-ಬನಹಟ್ಟಿ :** ವಿದ್ಯಾರ್ಥಿಗಳ ಸಾಧನೆಯ ಹಿಂದೆ ಪಾಲಕರ ಶ್ರಮ ಬಹಳ ಮಹತ್ವದ್ದಾಗಿದೆ ಎಂದು ಅಲ್ಪಸಂಖ್ಯಾತ ಸೊಸೈಟಿ ಅಧ್ಯಕ್ಷ ಇರ್ಷಾದ್ ಮೋಮಿನ್ ತಿಳಿಸಿದರು.

ಬನಹಟ್ಟಿಯ ಅಲ್ಪಸಂಖ್ಯಾತ ಸೊಸೈಟಿಯ ಸಭಾ ಭವನದಲ್ಲಿ ಎಸ್. ಎಸ್. ಎಲ್ಸಿ. ಹಾಗು ಪಿ.ಯು.ಸಿ. ಪರೀಕ್ಷೆಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಮಾತನಾಡಿದರು. ಗ್ರಾಮೀಣ ಪ್ರದೇಶದಲ್ಲಿಯ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸೂಕ್ತವಾದ ಪ್ರೋತ್ಸಾಹದೊರೆತರೆ ಅವರು ಕೂಡಾ ಉತ್ತಮ ಸಾಧನೆ ಮಾಡಬಲ್ಲರು. ಬಡ ವಿದ್ಯಾರ್ಥಿಗಳಿಗೆ ಸಮಾಜ ಸದಾ ಕಾಲ ಬೆಂಬಲವಿರುತ್ತದೆ. ಆರ್ಥಿಕ ಸಹಾಯಕ್ಕೆ ಸಹಕಾರಿ ಕ್ಷೇತ್ರದಿಂದ ಸಹಾಯ ಮುಖ್ಯವೆಂದರು. ಅಲ್ಪಸಂಖ್ಯಾತ ಸಮುದಾಯದ ಮುಖಂಡ ಯೂನುಸ್ ನಿಪ್ಪಾಣಿ ಮಾತನಾಡಿ, ಯಾವುದೇ ಕಾರಣಕ್ಕೂ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಬಾರದು. ಬಡ ವಿದ್ಯಾರ್ಥಿಗಳಿಗೆ ಬ್ಯಾಂಕ್ಗಳಿಂದ ಕಡಿಮೆ ದರದಲ್ಲಿ ಸಾಲ ಸೌಲಭ್ಯ ಹಾಗು ಸಹಕಾರಿ ಸಂಘ-ಸಂಸ್ಥೆಗಳ ಪ್ರೋತ್ಸಾಹವಿದೆ. ಇವುಗಳ ಸಹಾಯದಿಂದ ಉತ್ತಮ ಶಿಕ್ಷಣ ಪಡೆದುಕೊಂಡು ಸಮಾಜ ಸೇವೆಯೊಂದಿಗೆ ದೇಶಕ್ಕೆ ಸದೃಢ ಯುವಕರ ಪಾತ್ರ ಹಿರಿದಾಗಿದೆ ಎಂದರು. ಮುಜಾಫೀರ ಆಲಮೇಲ, ಅಂಜುಮಾನ-ಎ-ಇಸ್ಲಾಂ ಕಮಿಟಿ ಅಧ್ಯಕ್ಷ ಬುಡಾನ ಜಮಾದಾರ, ಹಾರುನ ಬೇವೂರ, ಮೆಹಬೂಬಸಾಬ ಡಾಂಗೆ, ಸಲೀಂ ಬಾರಿಗಡ್ಡಿ, ತೌಫಿಕ ಮುಲ್ಲಾ, ಶಾನೂರ ಮಾಲದಾರ, ಮುಸ್ತಾಕ ಶೇಖ್, ಮೌಲಾಸಾಬ ಸಂತಿ, ಮೆಹಬೂಬ ಪೆಂಢಾರಿ, ಮಲಿಕ್ ಬಾರಿಗಡ್ಡಿ, ರೆಹಮಾನ ಬಾಗಲಕೋಟ, ಅಜೀಜ್ ಶೇಖ್, ರಫೀಕ್ ಡಾಂಗೆ, ಪ್ರಕಾಶ ಡಾಂಗೆ, ಆರೀಫ್ ಅತ್ತಾರ, ಸಮೀರ ನಾಯಕವಾಡ, ಅಸ್ಲಂ ಗುರ್ಲಹೊಸೂರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ತುಂಬಿದ ಬಾಂದಾರ: ರೈತರಲ್ಲಿ ಹರ್ಷ



**ರಬಕವಿ-ಬನಹಟ್ಟಿ :** ಜಿ. ಎಲ್. ಬಿ. ಸಿ. ಕಾಲುವೆಯ ಮೂಲಕ ಬನಹಟ್ಟಿ ಕೆರೆಯನ್ನು ತುಂಬಿಸಲಾಗಿದ್ದು, ಕೆರೆಯಲ್ಲಿ ಹೆಚ್ಚಾದ ನೀರು ಹಳ್ಳದ ಮೂಲಕ ಹರಿದು ಬರುತ್ತಿದೆ.

ಬನಹಟ್ಟಿ ಹಳ್ಳಕ್ಕೆ ಮೂರು ಕಡೆಗಳಲ್ಲಿ ಬಾಂದಾರ ನಿರ್ಮಾಣ ಮಾಡಲಾಗಿದೆ. ಮೂರು ಬಾಂದಾರಗಳು ತುಂಬಿ ಹರಿಯುತ್ತಿವೆ. ಕೆರೆ ಮತ್ತು ಬಾಂದಾರಗಳು ತುಂಬಿ ಹರಿಯುತ್ತಿರುವುದರಿಂದ ರೈತರು ಹರ್ಷವನ್ನು ವ್ಯಕ್ತ ಪಡಿಸಿದ್ದಾರೆ.

ಕೆರೆಯಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿತ್ತು. ನಂತರ ಐದಾರು ತಿಂಗಳುಗಳಿಂದ ಬಾಂದಾರಗಳು ಸಂಪೂರ್ಣವಾಗಿ ಒಣಗಿದ್ದವು. ಈಗ ಕೆರೆ ಮತ್ತು ಬಾಂದಾರಗಳು ತುಂಬಿದ್ದರಿಂದ ಸುತ್ತ ಮುತ್ತಲಿನ ರೈತರ ಬಾವಿಗಳಲ್ಲಿ ಮತ್ತು ಕೊಳವೆ ಬಾವಿಗಳಲ್ಲಿ ಅಂತರ್ಜಲ ಮಟ್ಟ ಹೆಚ್ಚಾಗಲಿದೆ.

ಇದರಿಂದ ರೈತರ ಬೆಳೆಗಳಿಗೆ ಅನುಕೂಲವಾಗಲಿದೆ ಎಂದು ರೈತರಾದ ಅಪ್ಪು ಪಾಟೀಲ ತಿಳಿಸಿದರು.

# ದುಶ್ಚಟಗಳಿಂದ ಯುವಜನರನ್ನು ರಕ್ಷಿಸುವುದು ಎಲ್ಲರ ಜವಾಬ್ದಾರಿ: ನ್ಯಾ ಒಡೆಯರ್

**ಕೊಪ್ಪಳ :** ತಂಬಾಕು ಸೇವನೆಯಂತಹ ದುಶ್ಚಟಗಳಿಂದ ಯುವಜನತೆಯನ್ನು ರಕ್ಷಿಸುವುದು, ಅವರ ಆರೋಗ್ಯ ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿ ಎಂದು ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯಕಾರ್ಯದರ್ಶಿಗಳಾದ ಮಲಕಾರಿ ರಾಮಪ್ಪ ಒಡೆಯರ್ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಜಿಲ್ಲಾ ವಕೀಲರ ಸಂಘ ಕೊಪ್ಪಳ, ಜಿಲ್ಲಾ ಸರ್ವೇಕ್ಷಣಾ ಘಟಕ ಹಾಗೂ ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಕೊಪ್ಪಳ ಹಾಗೂ ಬ್ರಹ್ಮಕುಮಾರಿ ಯೋಗಿನಿ ಅಕ್ಕ, ಸಂಚಾಲಕರು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ, ಕೊಪ್ಪಳ ಇವರ ಸಂಯುಕ್ತ ಆಶ್ರಯದಲ್ಲಿ ಮೇ 31 ರಂದು ವಿಶ್ವ ತಂಬಾಕು ರಹಿತ ದಿನಾಚರಣೆ ಅಂಗವಾಗಿ ನಗರದ ಹಳೇ ಜಿಲ್ಲಾಸ್ಪತ್ರೆ ಆವರಣದಲ್ಲಿ ಆಯೋಜಿಸಿದ್ದ ಜನ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರತಿ ವರ್ಷದಂತೆ ತಂಬಾಕು ಉದ್ಯಮದ ಹಸ್ತಕ್ಷೇಪದಿಂದ ಮಕ್ಕಳನ್ನು ರಕ್ಷಿಸುವುದು ಎಂಬ ಘೋಷವಾಕ್ಯದೊಂದಿಗೆ ಈ ವರ್ಷ ವಿಶ್ವ ತಂಬಾಕು ರಹಿತ ದಿನವನ್ನು ಆಚರಣೆ ಮಾಡಲಾಗುತ್ತಿದೆ. ತಂಬಾಕನ್ನು ಯಾವುದೇ ಪ್ರಾಣಿ ಪಕ್ಷಿಗಳು ತಿನ್ನುವುದಿಲ್ಲ. ಆದರೆ ವಿಪರ್ಯಾಸವೆಂದರೆ ಎಲ್ಲರಿಗಿಂತಲೂ ಬುದ್ಧಿಶಾಲಿಯಾದ ಮನುಷ್ಯಪ್ರಾಣಿ ಇಂದು ತಂಬಾಕಿನ ದುಷ್ಚಟಕ್ಕೆ ಬಲಿಯಾಗುತ್ತಿದ್ದಾನೆ. ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ತಂಬಾಕು ಸೇವನೆ ದುಷ್ಚಟಕ್ಕೆ ಒಳಗಾಗುತ್ತಿದ್ದಾರೆ. ಇದರಿಂದ ಅವರ ಆರೋಗ್ಯ ಮತ್ತು ಸಮಾಜದ ಮೇಲೆ ಬಹಳಷ್ಟು ದುಷ್ಪರಿಣಾಮಗಳು ಬೀರುತ್ತವೆ ಹಾಗೂ ತಂಬಾಕು ಸೇವನೆಯಿಂದ ಮನುಷ್ಯನ ದೇಹದಲ್ಲಿ ಅಂಗಾಂಗ ವೈಕಲ್ಯ ಉಂಟಾಗುತ್ತದೆ ಮತ್ತು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಕುಂಠಿತಗೊಳ್ಳುತ್ತದೆ. ದುಶ್ಚಟಕ್ಕೆ ಬಲಿಯಾಗದಂತೆ ಯುವ ಜನತೆಯ ಆರೋಗ್ಯ ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡಿದರೆ ಕೋಟ್ಪಾ–2003 ರ ಕಾಯ್ದೆಯ ಪ್ರಕಾರ ದಂಡ ಮತ್ತು ಶಿಕ್ಷೆ ವಿಧಿಸಲಾಗುತ್ತದೆ. ಆದ್ದರಿಂದ ಎಲ್ಲರೂ ಒಳ್ಳೆಯ ಆರೋಗ್ಯಕರ ಅಭ್ಯಾಸಗಳನ್ನು ರೂಢಿಸಿಕೊಂಡು ತಮ್ಮ ಆರೋಗ್ಯವನ್ನು ಕಾಪಾಡಿಕೊಂಡು ಉತ್ತಮ ಸಮಾಜ ನಿರ್ಮಾಣ ಮಾಡೋಣ ಎಂದು ಅವರು ಹೇಳಿದರು.



ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಲಿಂಗರಾಜು ಟಿ. ಅವರು ಮಾತನಾಡಿ, ಪ್ರತಿ ವರ್ಷದಂತೆ ಈ ವರ್ಷವೂ ಮೇ 31 ರಂದು ವಿಶ್ವ ತಂಬಾಕು ರಹಿತ ದಿನಾಚರಣೆ ಕಾರ್ಯಕ್ರಮ ಆಚರಿಸಲಾಗುತ್ತಿದೆ. ಈ ವರ್ಷ ತಂಬಾಕು ಉದ್ಯಮದ ಹಸ್ತಕ್ಷೇಪದಿಂದ ಮಕ್ಕಳನ್ನು ರಕ್ಷಿಸುವುದು ಎಂಬ ಘೋಷವಾಕ್ಯದೊಂದಿಗೆ ಕಾರ್ಯಕ್ರಮ ಏರ್ಪಡಿಸಲಾಗಿದೆ. ಈ ಕಾರ್ಯಕ್ರಮದ ಉದ್ದೇಶ ತಂಬಾಕು ಸೇವನೆಯಿಂದ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವುದಾಗಿದೆ. ರಾಜ್ಯದಲ್ಲಿ ವಿಶ್ವ ತಂಬಾಕು ರಹಿತ ದಿನಾಚರಣೆಯನ್ನು 1988 ಮೇ 31 ರಿಂದ ಆಚರಿಸಲಾಗುತ್ತಿದೆ. ತಂಬಾಕಿನಲ್ಲಿ 7000 ವಿಷಾ ಅನಿಲಗಳು ಇರುತ್ತವೆ. ತಂಬಾಕು ತ್ಯಜಿಸಿದ 20 ನಿಮಿಷದಲ್ಲಿ ರಕ್ತದ ಒತ್ತಡ, ನಾಡಿ ಬಡಿತ ಮತ್ತು ದೇಹದ ಉಷ್ಣತೆ ಸಾಮಾನ್ಯ ಸ್ಥಿತಿಗೆ ಬರುತ್ತದೆ. ಗಂಟೆಯ ನಂತರ ದೇಹದಲ್ಲಿನ ಆಮ್ಲಜನಕ ಸಮಸ್ಥಿತಿಗೆ ಬಂದು ಉಸಿರಾಟ ಪ್ರಕ್ರಿಯೆ ಸರಳವಾಗುತ್ತದೆ. 24 ಗಂಟೆಯ ನಂತರ ಹೃದಯಾಘಾತವಾಗುವ ಸಂಭವ ಕಡಿಮೆಯಾಗುತ್ತದೆ. 48 ಗಂಟೆಯ ನಂತರ ದೇಹದ ನರಮಂಡಲ ಸರಿಯಾಗಿ ಕೆಲಸಮಾಡಲು ಶುರುವಾಗುತ್ತದೆ. ಬಾಯಿರುಚಿ ಮತ್ತು ವಾಸನೆ ಗ್ರಹಿಕೆ ಸರಿಯಾಗುತ್ತದೆ. 2 ವಾರದಿಂದ 3 ತಿಂಗಳವರೆಗೆ ರಕ್ತ ಪರಿಚಲನೆ ಸರಿಯಾಗಿ ದೇಹದ ಸಾಮರ್ಥ್ಯ ಹೆಚ್ಚುತ್ತದೆ. ಪುಪ್ಪುಸ ಕಾರ್ಯ ಶೇ.30 ರಷ್ಟು ಜಾಸ್ತಿಯಾಗುತ್ತದೆ ಎಂದು ಅವರು ತಿಳಿಸಿದರು. ನಮ್ಮ ದೇಶದಲ್ಲಿ, ತ್ರಿಪುರಾ ರಾಜ್ಯ ಹೆಚ್ಚು ತಂಬಾಕು ಬಳಸುವ ರಾಜ್ಯವಾಗಿದೆ(ಶೇ.65) ಉಟಂಭಚಿಟ ಂಜಣಟಣ ಖಿಂಭಚಿಛಿಛಿಂ ಖಣಡಿತಜಥಿ ಅನುಸಾರ ಕರ್ನಾಟಕ ರಾಜ್ಯದಲ್ಲಿ ಶೇ.28.2 ವಯಸ್ಕರು (15 ವರ್ಷ ಮತ್ತು ಮೇಲ್ಪಟ್ಟವರು) ತಂಬಾಕು ವ್ಯಸನಿಗಳಿದ್ದಾರೆ. ಅದರಲ್ಲಿ ಶೇ.12 ರಷ್ಟು ಧೂಮಪಾನಿಗಳು ಮತ್ತು ಶೇ.19 ರಷ್ಟು ಹೊಗೆರಹಿತ ತಂಬಾಕು ಬಳಸುತ್ತಾರೆ ಎಂದು ತಿಳಿಸಿದ ಅವರು, ತಂಬಾಕಿನ ಬಗೆಗಿನ ಸತ್ಯಾಂಶಗಳು ಮತ್ತು ವಿಶ್ವದಾದ್ಯಂತ ತಂಬಾಕು ಸೇವನೆಯಿಂದ ಮತ್ತು ಧೂಮಪಾನದಿಂದ ಬರಬಹುದಾದಂತಹ ಖಾಯಿಲೆಗಳಾದ ಬಾಯಿ ಕ್ಯಾನ್ಸರ್, ಹೃದಯ ಸಂಬಂಧಿತ ಕಾಯಿಲೆಗಳು ಮತ್ತು ಶ್ವಾಸಕೋಶದ ಕಾಯಿಲೆಗಳ ನಿಯಂತ್ರಣ ಮತ್ತು ತಡೆಗಟ್ಟುವ ಕ್ರಮಗಳ ಕುರಿತು ವಿವರವಾಗಿ ಮಾತನಾಡಿದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ॥ ನಂದಕುಮಾರ ಅವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಯುವಕರು ಹೆಚ್ಚಾಗಿ ದುಶ್ಚಟಕ್ಕೆ ಒಳಗಾಗುತ್ತಿದ್ದಾರೆ ಎಂದ ಅವರು ಹದಿಹರೆಯದವರ ಆರೋಗ್ಯ ಸಮಸ್ಯೆಗಳು ಮತ್ತು ಪರಿಹಾರ ಕುರಿತು ತಿಳಿಸಿದರು. ತಂಬಾಕು ಸೇವನೆಯಿಂದ ದೂರವಿದ್ದು ಯುವಕರು ಜಾಗೃತರಾಗಿ ತಮ್ಮ ವಿದ್ಯೆ ಮತ್ತು ಜೀವನದ ಕಡೆಗೆ ಹೆಚ್ಚು ಗಮನ ಹರಿಸಬೇಕೆಂದು ತಿಳಿಸಿದರು.

ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಸಂಚಾಲಕರಾದ ಬ್ರಹ್ಮಕುಮಾರಿ ಯೋಗಿನಿ ಅಕ್ಕ ಅವರು ಮಾತನಾಡಿ, ಯೋಗದ ಮತ್ತು ಧ್ಯಾನದ ಮೂಲಕ ಮನಸ್ಸನ್ನು ನಿಯಂತ್ರಣದಲ್ಲಿ ಇರಿಸಲು ಸಾಧ್ಯವಾಗುತ್ತದೆ. ಇದರಿಂದ ಸುಮಾರು 60 ಕ್ಕೂ ಹೆಚ್ಚು ಜನರು ಕುಡಿತದ ದುಶ್ಚಟದಿಂದ ಮುಕ್ತಿ ಹೊಂದಿರುತ್ತಾರೆ. ಯೋಗ ಮತ್ತು ಧ್ಯಾನದಿಂದ ಮನುಷ್ಯನ ಆರೋಗ್ಯ ಮತ್ತು ಮನಸ್ಸು ಎರಡೂ ನಿಯಂತ್ರಣದಲ್ಲಿ ಇರುವುದರ ಜೊತೆಗೆ ತಂಬಾಕು, ಮದ್ಯಪಾನ ಹೀಗೆ ಅನೇಕ ದುಶ್ಚಟಗಳಿಂದ ಮುಕ್ತಿ ಹೊಂದಬಹುದಾಗಿದೆ ಎಂದು ತಿಳಿಸುತ್ತ, ದುಷ್ಚಟಗಳಿಗೆ ಒಳಗಾದವರನ್ನು ತಮ್ಮ ಸಂಸ್ಥೆಯಿಂದ ಏರ್ಪಡಿಸಿರುವ ಯೋಗ ಮತ್ತು ಧ್ಯಾನ ಶಿಬಿರದಲ್ಲಿ ಭಾಗವಹಿಸಿ ಅದರ ಲಾಭ ಪಡೆದುಕೊಳ್ಳುವಂತೆ ತಿಳಿಸಿದರು.

ನಂತರ ವಿಶ್ವ ತಂಬಾಕು ರಹಿತ ದಿನಾಚರಣೆ ಅಂಗವಾಗಿ ತಂಬಾಕು ವ್ಯಸನ ಮುಕ್ತ ಕೇಂದ್ರಕ್ಕೆ ಭೇಟಿ ನೀಡಲಾಯಿತು. ಅಲ್ಲಿ ಆಪ್ತ ಸಮಾಲೋಚನೆ ಮತ್ತು ನಿಕೋಟಿನ್ ಗಮ್‌ಗಳ ಸಹಾಯದಿಂದ ತಂಬಾಕು ಸೇವನೆ ತ್ಯಜಿಸಿದ ಮಹಮ್ಮದ ಅಲಿ ಎಂಬುವವರನ್ನು ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಲಕಾರಿ ರಾಮಪ್ಪ ಒಡೆಯರ್ ಅವರು ಕಿರು ಕಾಣಿಕೆ ಕೊಡುವುದರ ಮೂಲಕ ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಎ.ವಿ.ಕಣವಿ, ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ॥ ಪ್ರಕಾಶ, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ॥ ರವಿಂದ್ರನಾಥ ಎಂ. ಹೆಚ್, ಜಿಲ್ಲಾ ಕುಷ್ಟರೋಗ ನಿರ್ಮೂಲನಾಧಿಕಾರಿ ಡಾ॥ ಪ್ರಕಾಶ ಹೆಚ್, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ॥ ವೆಂಕಟೇಶ ಕೆ, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ॥ ಶಶಿಧರ್ ಎ, ತಾಲ್ಲೂಕು ಆರೋಗ್ಯಾಧಿಕಾರಿ ಡಾ॥ ರಾಮಾಂಜನೇಯ, ಪ್ರಭಾರಿ ಜಿಲ್ಲಾ ಸಲಹೆಗಾರರಾದ ಡಾ॥ ಜಯಶ್ರೀ, ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾದ ಡಾ॥ ಮಹೇಶ ಉಮಚಗಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾನಂದ ವಿ. ಪೂಜಾರ, ಸೈಕಾಲಾಜಿಸ್ಟ್ ಶಾಂತಮ್ಮ ಕಟ್ಟಿಮನಿ, ಹಿ.ಆ.ನಿ.ಅ. ಎಲ್.ವ್ಹಿ ಸಜ್ಜನರ್ ಮತ್ತು ಆರೋಗ್ಯ ಇಲಾಖೆಯ ಎಲ್ಲಾ ಸಿಬ್ಬಂದಿಗಳು ಹಾಗೂ ಆಶಾ

# ಸಂಚಾರಿ ನೇರ ಮಾರುಕಟ್ಟೆ ವ್ಯವಸ್ಥೆ ಉದ್ಘಾಟನೆ

**ಧಾರವಾಡ :** ಧಾರವಾಡದ ಕೃಷಿ ಇಲಾಖೆ, ಕೃಷಿ ತಂತ್ರಜ್ಞರ ಸಂಸ್ಥೆ, ಕೃಷಿ ಪದವೀಧರ ಅಧಿಕಾರಿಗಳ ಸಂಘದ ಸಂಯುಕ್ತ ಆಶ್ರಯದಲ್ಲಿ ರೈತರು ಮತ್ತು ಗ್ರಾಹಕರ ನಡುವಿನ ಸಂಚಾರಿ ನೇರ ಮಾರುಕಟ್ಟೆ ವ್ಯವಸ್ಥೆಯನ್ನು ಉದ್ಘಾಟಿಸಲಾಯಿತು. ಕಲಘಟಗಿ ತಾಲ್ಲೂಕಿನ ಗುಡ್ಡದ ಹುಲಿಕಟ್ಟಿ ಹಾಗೂ ಸುತ್ತಮುತ್ತಲ ಗ್ರಾಮಗಳಲ್ಲಿ ಸಾವಯವ ಪದ್ಧತಿಯಲ್ಲಿ ಬೆಳೆದ ಕೃಷಿ ಉತ್ಪನ್ನಗಳು ಹಾಗೂ ಸಂಸ್ಕರಿಸಿದ ಉತ್ಪನ್ನಗಳನ್ನು ಮಾರಾಟ ಮಾಡುವ ವಾಹನಕ್ಕೆ ಜಂಟಿ ಕೃಷಿ ನಿರ್ದೇಶಕರಾದ ಡಾ. ಎಂ. ಕಿರಣಕುಮಾರ ಅವರು ಚಾಲನೆ ನೀಡಿದರು.

ರೈತರು ಶ್ರಮವಹಿಸಿ ಬೆಳೆಯುವ ಉತ್ಪನ್ನಗಳಿಗೆ ಯೋಗ್ಯ ಬೆಲೆ ದೊರೆಯಬೇಕೆಂದರೆ ನೇರ ಮಾರುಕಟ್ಟೆ ವ್ಯವಸ್ಥೆ ರೂಢಿಸಿಕೊಳ್ಳಬೇಕು. ಇದರಿಂದ ಗ್ರಾಹಕರಿಗೂ ಸುರಕ್ಷಿತ ಮತ್ತು ಆರೋಗ್ಯಯುಕ್ತ ಆಹಾರೋತ್ಪನ್ನಗಳು ನ್ಯಾಯಯುತ ಬೆಲೆಯಲ್ಲಿ ಸಿಗುತ್ತವೆ. ಇಂತಹ ವ್ಯವಸ್ಥೆಯಲ್ಲಿ ಪರಸ್ಪರ ವಿಶ್ವಾಸಾರ್ಹತೆಯಿಂದ ನಡೆದುಕೊಳ್ಳುವುದು ಎಲ್ಲ ಪಾಲುದಾರರ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಸಾವಯವ ರೈತರ ಸಮೂಹ ರಚಿಸಿಕೊಂಡಿರುವ ಎಂ.ವಿ.ಪಾಟೀಲ ಇವರು ತಮ್ಮ ಉತ್ಪನ್ನಗಳು ಅಪ್ಪಟ ಸಾವಯವ ಪದ್ಧತಿಯಲ್ಲಿ ಬೆಳೆದಿದ್ದು, ಮಾರುಕಟ್ಟೆಗಿಂತ ಕಮ್ಮಿ ಬೆಲೆಯಲ್ಲಿ ನೀಡುವುದಾಗಿ ಹೇಳಿದರು. ಪ್ರತಿ



ಮಂಗಳವಾರ ಧಾರವಾಡದ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಬೆಳಿಗ್ಗೆ 10:30 ಗಂಟೆಗೆ ಮತ್ತು ಮಧ್ಯಾಹ್ನ 2:30 ಗಂಟೆಗೆ ಕೃಷಿ ಇಲಾಖೆಯಲ್ಲಿ ಉತ್ಪನ್ನಗಳನ್ನು ಮಾರಾಟ ಮಾಡಲಾಗುವುದು ಎಂದರು. ಇತರೆ ಬಡಾವಣೆಗಳು ಮತ್ತು ಪ್ರದೇಶಗಳ ಜನರಿಗೆ ಸಾವಯವ ಉತ್ಪನ್ನಗಳನ್ನು ಖರೀದಿಸುವ ಇಚ್ಛೆ ಇದ್ದರೆ ಸಂಚಾಲಕ ಎಂ.ವಿ.ಪಾಟೀಲ ಅವರನ್ನು ಸಂಪರ್ಕಿಸಬಹುದಾಗಿದ್ದು ಅವರ ದೂರವಾಣಿ ಸಂಖ್ಯೆ: 997200958 ಇರುತ್ತದೆ.

ಕಾರ್ಯಕ್ರಮದಲ್ಲಿ ಕೃಷಿ ತಂತ್ರಜ್ಞರ ಸಂಸ್ಥೆಯ ಕಾರ್ಯದರ್ಶಿ ಡಾ.ಎಸ್. ಎಸ್. ಡೊಳ್ಳಿ, ಸಾವಯವ ಕೃಷಿ ತಜ್ಞರಾದ ಡಾ. ಎಚ್.ಬಿ. ಬಬಲಾದ, ಉಪ ಕೃಷಿ ನಿರ್ದೇಶಕರಾದ ಜಯಶ್ರೀ ಹಿರೇಮಠ, ಸ್ಮಿತಾ ಆರ್, ಸಹಾಯಕ ಕೃಷಿ ನಿರ್ದೇಶಕರಾದ ಚನ್ನಪ್ಪ ಅಂಗಡಿ, ಆಶಾ ಮಿಕಲಿ, ಗೀತಾ ಕಡಪಟ್ಟಿ, ಗೀತಾ ಎಲ್, ಕೃಷಿ ಪದವಿಧರ ಅಧಿಕಾರಿಗಳ ಸಂಘದ ಅಧ್ಯಕ್ಷರಾದ ವಿ.ವಿ.ವಿಠ್ಠಲರಾವ್ ಭಾಗವಹಿಸಿದ್ದರು. ಸ್ವದೇಶಿ ಆಂದೋಲನದ ಎಂ.ಡಿ.ಪಾಟೀಲ, ಕೃಷಿ ವಿಜ್ಞಾನಿಗಳಾದ ಡಾ. ಬಿ.ಎನ್. ಮೊಟಗಿ, ನಿಸರ್ಗ ಲಕ್ಷ್ಮೀ ಸಸಿ ದಾಸೋಹದ ಬಿ.ಎಸ್.ಕೊಣ್ಣೂರ, ಮಾವು ಬೆಳೆಗಾರ ಬಳಗದ ಜಿ.ಎಂ.ಹೊಸಮನಿ, ಯೋಗಪಟು ಟಕ್ಕಳಕಿ, ಶಿವರಾಜ ಹುನಗುಂದ, ಶಿವಾನಂದ ಕುಂಬಾರ, ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಮುಖ್ಯ ಪ್ರಬಂಧಕ ಉಲ್ಲಾಸ ಗುನಗಾ, ಪ್ರಗತಿಪರ ರೈತ ಈರಣ್ಣ ಬಾರಕೇರ, ರಾಜ್ಯ ಸರಕಾರಿ ನೌಕರರ ಸಂಘದ ರಾಜಶೇಖರ ಬಾಣದ, ಪ್ರಗತಿಪರ ರೈತ ಹಾಗೂ ಪಕ್ಷಿ ವೀಕ್ಷಕ ಆರ್ ಜಿ ತಿಮ್ಮಾಪುರ, ಕೃಷಿ ಅಧಿಕಾರಿಗಳಾದ ಮಾಲತೇಶ ಪುಟ್ಟಣ್ಣವರ, ಮಂಜುನಾಥ ಹೂಗಾರ, ಇನ್ನೂ ಅನೇಕ ಹಿರಿ–ಕಿರಿಯ ಅಧಿಕಾರಿಗಳು, ಸಿಬ್ಬಂದಿಗಳು ಹಾಜರಿದ್ದು ಸಾವಯವ ಉತ್ಪನ್ನಗಳನ್ನು ಖರೀದಿಸಿದರು.

# ತೋಟಗಾರಿಕೆತರಬೇತಿ: ಸಂದರ್ಶನ ದಿನಾಂಕ ಪರಿಷ್ಕರಣೆ

**ಬೆಳಗಾವಿ :** 2024–25ನೇ ಸಾಲಿನ ಜಿಲ್ಲೆಯ ರೈತ ಮಕ್ಕಳಿಗೆ ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಡ್ಯಾಂ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ 10 ತಿಂಗಳ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿತ್ತು.

ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಸಂದರ್ಶನದ ದಿನಾಂಕವನ್ನು ಜೂ.25 ರಂದು ನೀಡಲಾಗಿತ್ತು ಅದರ ಬದಲಿಗೆ ಜೂ.06 ರಂದು ಪರಿಷ್ಕರಿಸಲಾಗಿದೆ. ಜೂ.06 ರಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು(ರಾವ) ಅವರ ಕಛೇರಿಯಲ್ಲಿ ಬೆಳಿಗ್ಗೆ 11 ಗಂಟೆಗೆ ನೇರವಾಗಿ ಮೂಲ ದಾಖಲಾತಿಗಳೊಂದಿಗೆ ಸಂದರ್ಶನಕ್ಕೆ ಹಾಜರಾಗಬೇಕು.

ಹೆಚ್ಚಿನ ಮಾಹಿತಿಗಾಗಿ ದೂ. 8197840336, 8867887191, 9742414741 ಸಂಖ್ಯೆಗಳಿಗೆ ಸಂಪರ್ಕಿಸಬಹುದು, ಹೆಚ್ಚಿನ ವಿವರಗಳಿಗೆ ಆಯಾ ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ) ಅವರ ಕಛೇರಿಯಲ್ಲಿ ವಿಚಾರಿಸಬಹುದು ಎಂದು ಬೆಳಗಾವಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾವ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಚಿತ್ತವಾಡಗಿ ಶ್ರೀ ವೀರಭದ್ರೇಶ್ವರ 42ನೇ ಮಾಸಿಕ ಶಿವಾನುಭವ ಕಾರ್ಯಕ್ರಮ




**ಹುನಗುಂದ :** ಸಮೀಪದ ಸುಕ್ಷೇತ್ರ ಶ್ರೀ ಚಿತ್ತವಾಡಗಿ ಗ್ರಾಮದಲ್ಲಿ ವೀರಭದ್ರೇಶ್ವರ ೪೨ನೇ ಮಾಸಿಕ ಶಿವಾನುಭವ ಕಾರ್ಯಕ್ರಮವು ಗುರುವಾರ ಜೂನ್ ೬ ರಂದು ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಜರುಗಿತು ಕಾರ್ಯಕ್ರಮದದಿವ್ಯಸಾನಿಧ್ಯವನ್ನುಶ್ರೀಮನ್‌ನಿರಂಜನ ಪ್ರಣವ ಸ್ವರೂಪಿ ಶಂಕರ ರಾಜೇಂದ್ರ ಮಹಾಸ್ವಾಮಿಗಳು ಶ್ರೀ ಪ್ರಭುಶಂಕರೇಶ್ವರಮಠ ಯರಿಗೋನಾಳ ಅಮೀನಗಡ ವಹಿಸಿದ್ದರು ಅತಿಥಿಗಳಾಗಿ ನಿವೃತ್ತ ಶಿಕ್ಷಕ ಎ.ಆರ್ ನಡುವಿನ ಮನಿ ಭಾಗವಹಿಸಿ ಶಿವಾನುಭವದ ಬಗ್ಗೆ ಮಾತನಾಡಿ ಜೀವನದಲ್ಲಿ ನಾವು ಮಠ ಮಾನ್ಯಗಳಿಗೆ ಹೋಗುವುದರಿಂದ ಆಧ್ಯಾತ್ಮಿಕದ ಬಗ್ಗೆ ಚಿಂತನೆ ಮಾಡಿ ಆದರ್ಶ ವ್ಯಕ್ತಿಗಳಾಗ ಬಹುದು. ಎಂದರು ಇನ್ನೋರ್ವ ಅತಿಥಿಗಳಾಗಿ ಮಡಿವಾಳಪ್ಪ ವೈ ವಾಲಿಕಾರ ಇವರು ಜಾತಿ ಮೇಲು ಕೀಳು ಎಂಬ ಭಾವನೆ ಮರೆತು ಎಲ್ಲರೂ ಒಂದೇ ಎಂಬ ಭಾವನೆ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಮ್ಮ ಪ್ರವಚನದ ಮೂಲಕ ತಿಳಿಸಿದರು.

ಶ್ರೀ ಚಂದ್ರಶೇಖರ ಬಡಿಗೇರ ಶ್ರೀ ತಿಪ್ಪಣ್ಣ ಪಾಟೀಲ್ ಸಂಗೀತ ಸೇವೆ ಸಲ್ಲಿಸಿದರು. ಸೋಮಮಠ ಇವರು ವಂದನಾರ್ಪಣೆ ಕಾರ್ಯಕ್ರಮ ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಅಮರನಾಥ ಹಳ್ಳೂರ ಮುಖ್ಯೋಪಾಧ್ಯಾಯರು ಶ್ರೀ ಬಸವೇಶ್ವರ ಸಂಯುಕ್ತ ಪ್ರೌಢಶಾಲೆ ಬಳಗಾನೂರ ಭಾಗವಹಿಸಿದ್ದರು ಮತ್ತು ಶಂಕರೇಗೌಡ ಪಾಟೀಲ್ ಕಾರ್ಯಕ್ರಮ ನಿರ್ವಹಿಸಿದರು ಈ ಕಾರ್ಯಕ್ರಮದಲ್ಲಿ ಸುತ್ತಮುತ್ತಲಿನ ಗ್ರಾಮಗಳ ಶರಣ ಶರಣೆಯರು ಭಾಗವಹಿಸಿದ್ದರು.... ಶಿವಾನುಭವ ಪತ್ರಿಕೆ ಸೇವೆಯನ್ನು ಎಂ ಎಸ್ ಹುಲ್ಯಾಳ್ ನಡೆಸಿಕೊಟ್ಟರು.

ವೀರಭದ್ರೇಶ್ವರ ದೇವಸ್ಥಾನ ಕಮೀಟಿ ಸದಸ್ಯರು ಸಮಸ್ತ ಭಕ್ತರು ಭಾಗವಹಿಸಿದ್ದರು.

# ಯಡ್ರಾಮಿ ತಾ.ಪಂ.ಯಲ್ಲಿ 2 ಕೋಟಿ ಹಣ ದುರುಪಯೋಗ





**ಯಡ್ರಾಮಿ :** ಸದಸ್ಯರಿಲ್ಲದ ಸದಸ್ಯರಿಲ್ಲದ ತಾಲೂಕು ಪಂಚಾಯತಿಯ ಅಧಿಕಾರಿಗಳು ಆಡಿದ್ದೇ ಆಟಾ ಅನಿರ್ಭಂದಿತ ಯೋಜನೆಯಲ್ಲಿ ರಿಪೇರಿ ಕಾಮಗಾರಿಗಳು ಸಂಪೂರ್ಣ ಹಣ ರಿಪೇರಿ ಕಾಮಗಾರಿ ಮಾಡದೇ ಹಣ ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ಬಿಸಿಲು ನಾಡಿನ ಹಸಿರು ಸೇನೆಯ ಜಿಲ್ಲಾ ಅಧ್ಯಕ್ಷ ಶಫೀ ಉಲ್ಲಾ ದಖನಿ ಆರೋಪಿಸಿದ್ದಾರೆ.

ತಾಲೂಕು ತಾಲೂಕು ಪಂಚಾಯತಿಯಾಗಿ ಹಲವಾರು ವರ್ಷಗಳು ಕಳೆದರೂ ಕೂಡ ಚುನಾವಣೆ ಆಗದೆ ಚುನಾಯಿತ ಸದಸ್ಯರು ಇಲ್ಲದೆ ಇರುವದರಿಂದ ತಮ್ಮ ಮನಸ್ಸಿಗೆ ಬಂದ ರೀತಿಯಲ್ಲಿ ಆಡಳಿತ ಮಾಡುತ್ತಿದ್ದಾರೆ.

2023–24 ಸಾಲಿನ ನಿರ್ಭಂದಿತ ಯೋಜನೆ ಅಡಿಯಲ್ಲಿ ಸುಮಾರು 2 ಕೋಟಿಯ ತಾಲೂಕಿನ 16 ಪಂಚಾಯತಿ ವ್ಯಾಪ್ತಿಯಲ್ಲಿ ಸುದಾರಣಾ ಕಾಮಗಾರಿಗಳಾದ ಶಾಲಾ ಅಂಗನವಾಡಿ ಕಂಪೊಂಡ್ ವಾಲ್ ರಿಪೇರಿಯ ಹೀಗೆ ಮಾಡಬೇಕು.

ಮಹಾಂತೇಶ ಪುರಾಣಿಕ ಪ್ರಭಾರಿ ಕಾರ್ಯನಿರ್ವಾಹಕ ತಾಲೂಕು ಪಂಚಾಯತಿ ಅಧಿಕಾರಿಯೂ ಪ್ರತಿಯೊಂದು ಗ್ರಾಮಗಳಿಗೆ ಬೇಟಿ ನೀಡಿ ಕಾಮಗಾರಿ ಕ್ರೀಯಾ ಯೋಜನೆ ಮಾಡಬೇಕು ತಮ್ಮ ಬೇಕಾದ ಮುಖಂಡರು ಹೇಳಿದ ಹಾಗೆ ಕಾಮಗಾರಿ ಕ್ರೀಯಾಯೋಜನೆ ಮಾಡಿ ಬಿಲ್ ಮಾಡಿಕೊಂಡಿದ್ದಾರೆ.

ಹೊಸ ಕಟ್ಟಡಗಳಿಗೂ ರಿಪೇರಿ ಮಾಡಲಾಗಿದೆ ಹಾಗೂ ಕೆಲವು ಕಾಮಗಾರಿಯೂ ಸುಣ್ಣ ಬಣ್ಣ ಹಚ್ಚಿ ರಪೇರಿ ಮಾಡಲಾಗಿದೆ ಎಂದು ಸರ್ಕಾರದ ಹಣ ದುರುಪಯೋಗ ಮಾಡಿಕೊಂಡಿದ್ದು.

ಯಾವುದೇ ಕಾಣಕ್ಕೂ ಸ್ಥಳೀಯರನ್ನು ಅಧಿಕಾರಿಯಾಗಿ ನೀಡಬಾರದು ಹೀಗೆ ಇದ್ದರು ಕೂಡ ಪ್ರಭಾರಿಯಾಗಿ ಸುಮಾರು ಎರಡೂ ವರ್ಷಗಳಿಂದ ಕಾರ್ಯ ಮಾಡುತ್ತಿದ್ದು ತಕ್ಷಣ ಜಿಲ್ಲಾ ಆಡಳಿತ ಸುಕ್ತವಾದ ತನಿಖೆ ಕೈಗೊಂಡು ಕಾನೂನು ಕ್ರಮಕೈಗೊಳ್ಳಬೇಕು.

ಈಗಾಗಲೇ ಹಲವಾರು ಸಾರ್ವಜನಿಕರು ಜಿಲ್ಲಾ ಪಂಚಾಯತಿ ಕಾರ್ನಿವಾರ್ಹಕ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದು ಯಾವುದೇ ಕ್ರಮ ಮಾತ್ರ ಇಲ್ಲ ಹೀಗೆ ಮುಂದುವರಿದರೆ ತಾಲೂಕಿನಲ್ಲಿ ಉಗ್ರವಾದ ಹೋರಾಟ ಮಾಡಲಾಗುವುದು ಎಂದು ಶಫೀ ಉಲ್ಲಾ ದಖನಿ ಬಿಸಿಲು ನಾಡಿನ ಹಸಿರು ಸೇನೆ ಜಿಲ್ಲಾ ಅಧ್ಯಕ್ಷರು ಎಚ್ಚರಿಕ್ಕೆ ನೀಡಿದ ಅವರು ಸ್ಥಳಿಯರನ್ನು ಪ್ರಭಾರಿ ತಾಲೂಕ ಪಂಚಾಯತ್ ಅಧಿಕಾರಿ ಗಳನ್ನಾಗಿ ನೇಮಕ ಮಾಡಿದ್ದೆ ಎಲ್ಲಾ ಅನುದಾನ ದುರುಪಯೋಗ ಪಡಿಸಿಕೊಳ್ಳುತ್ತಿದ್ದು ತಕ್ಷಣ ತನಿಖೆ ನಡೆಸಿ ಅಧಿಕಾರಿಗಳ ವಿರುದ್ಧ ಸೂಕ್ತವಾದ ಕಾನೂನು ಕ್ರಮ ಕೈಗೊಳ್ಳಲು ಬಿಸಿಲು ನಾಡಿನ ಹಸಿರು ಸೇನೆ ಜಿಲ್ಲಾ ಅಧ್ಯಕ್ಷರು ಸಂಬಂಧ ಪಟ್ಟ ಜಿಲ್ಲಾ, ರಾಜ್ಯ ಮಟ್ಟದ ಅಧಿಕಾರಿಗಳಿಗೆ ಪತ್ರ ಬರೆದು ಆಗ್ರಹಿಸಿದ್ದಾರೆ.

## ಅಧಿಕಾರಿಗಳ ಸ್ಪಷ್ಟನೆ

**2 ಕೋಟಿ ಹಣದ ಹಗರಣ ಕುರಿತಂತೆ ಅಧಿಕಾರಿಗಳ ಸ್ಪಷ್ಟನೆ ನೀಡಿ ತಾಲೂಕಿನ ಎಲ್ಲಾ ಗ್ರಾಮಗಳಿಗೂ ಬೇಟಿ ನೀಡಿ ಕಾಮಗಾರಿ ಪರಿಶೀಲಿಸಿ ಬಿಲ್ ಮಾಡಲಾಗಿದ್ದು.ಯಾವುದೇ ದುರುಪಯೋಗ ಕಂಡು ಬಂದಿಲ್ಲ.**

**◆ ಮಹಾಂತೇಶ ಪುರಾಣಿಕ**
**ಪ್ರಭಾರಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಯಡ್ರಾಮಿ.**

# ವಿಷಕಂಠ ಕ್ರಿಕೆಟ್ ಟೂರ್ನಾಮೆಂಟ್ ಉದ್ಘಾಟನೆ



**ಕೂಡ್ಲಿಗಿ :** ತಾಲೂಕಿನ ಹೂಡೇಂ ಗ್ರಾಮದಲ್ಲಿ ಶುಕ್ರವಾರ ನಡೆದ ಶ್ರೀ ವಿಷಕಂಠ ಕ್ರಿಕೆಟರ್ಸ್ ಹೂಡೇಂ, ಪ್ರಥಮ ಬಾರಿಗೆ ತಾಲೂಕು ಮಟ್ಟದ ಟೆಂಪರ್ ಬಾಲ್ ಕ್ರಿಕೆಟ್ ಟೂರ್ನಾಮೆಂಟ್ ಉದ್ಘಾಟನೆಯನ್ನು ಎಚ್.ಓ. ಕೊಟ್ರೇಶ್ ಯುವ ಕಾಂಗ್ರೆಸ್ ಮುಖಂಡರು ಹೂಡೇಂ ಹಾಗೂ ಹೂಡೇಂ ಗ್ರಾ.ಪಂ ಅಧ್ಯಕ್ಷರು ರಾಮಚಂದ್ರಪ್ಪ ಬಿ ಇವರು ಉದ್ಘಾಟಿಸಿದರು. ಕ್ರಿಕೆಟ್ ಟೂರ್ನಾಮೆಂಟ್ಗೆ ಎಚ್.ಓ ಕೊಟ್ರೇಶ್ ಕಾಂಗ್ರೆಸ್ ಯುವ ಮುಖಂಡರು ಪ್ರಥಮ ಬಹುಮಾನ 15 ಸಾವಿರ ಕೊಡಿಗೆ ನೀಡಿದ್ದಾರೆ ಹಾಗೂ ಬಿ ರಾಮಚಂದ್ರಪ್ಪ ಗ್ರಾ.ಪಂ ಅಧ್ಯಕ್ಷರು ದ್ವಿತೀಯ ಬಹುಮಾನ 10 ಸಾವಿರ ಕೊಡುಗೆ ನೀಡಿ ಮಾತನಾಡಿದ ಅವರು ಯುವಕರು ದೇಶದ ನಿಜವಾದ ಸಂಪತ್ತು. ನಿತ್ಯ ಕ್ರೀಡೆಯಲ್ಲಿ ಪಾಲ್ಗೊಳ್ಳುವುದರಿಂದ ದೈಹಿಕ ಮತ್ತು ಮಾನಸಿಕ ಸ್ಥೈರ್ಯ ಹೆಚ್ಚುತ್ತದೆ. ಪ್ರತಿಯೊಬ್ಬರೂ ಕ್ರೀಡೆಯಲ್ಲಿ ಭಾಗವಹಿಸಬೇಕು. ಕ್ರೀಡೆಯಿಂದ ಮನಸ್ಸು ಮತ್ತು ದೇಹ ಸದಢವಾಗಿರುತ್ತದೆ. ಸೋಲು –ಗೆಲುವು ಎರಡನ್ನೂ ಸಮಾನವಾಗಿ ಸ್ವೀಕರಿಸಬೇಕು ಎಂದು ಹೇಳಿದರು. ಈ ವೇಳೆ ನೆರೆದಿದ್ದ ವಿವಿಧ ತಂಡಗಳ ಆಟಗಾರರಿಗೆ ಶುಭಕೋರಿದರು. ಈ ಕಾರ್ಯಕ್ರಮದಲ್ಲಿ ಮಾಜಿ ತಾ.ಪಂ ಸದಸ್ಯ ಪಾಪ ನಾಯಕ, ಗ್ರಾಮ ಪಂಚಾಯಿತಿ ಸದಸ್ಯರಾದ ಸುಂದ್ರಮ್ಮ ಮಲ್ಲಿಕಾರ್ಜುನ್, ಎಲ್ಲಪ್ಪ, ಶಶಿಕಲಾ ಜಯಣ್ಣ, ಪುಟ್ಟಮ್ಮ ಮಲ್ಲಿಕಾರ್ಜುನ್, ಶ್ರೀ ಕಂಬಳ ರಂಗ ಸ್ವಾಮಿ ಪ್ರೌಢಶಾಲೆಯ ಮುಖ್ಯ ಶಿಕ್ಷಕರು ಅಜ್ಜಪ್ಪ, ಸೇರಿದಂತೆ ಗ್ರಾಮ ಪಂಚಾಯತಿಯ ಸದಸ್ಯರು, ಮುಖಂಡರು, ಕ್ರೀಡಾಭಿಮಾನಿಗಳು, ಸಾರ್ವಜನಿಕರು ಇದ್ದರು.

# ಅಕ್ರಮ ಲೈಂಗಿಕ ಚಟುವಟಿಕೆಗಳ ತಾನವಾಗುತ್ತಿರುವ ಬನಹಟ್ಟಿ ರೇವಣ್ಣ ಲಾಡ್ಜ್

**ರಬಕವಿ ಬನಹಟ್ಟಿ :** ತಾಲೂಕಿನ ಬನಹಟ್ಟಿ ನಗರದಲ್ಲಿ ದಿನೇ ದಿನೇ ಆಕ್ರಮ ಅನೈತಿಕ ಲೈಂಗಿಕ ಚಟುವಟಿಕೆಗಳು ನಡೆಯುವಲ್ಲಿ ಭಾರಿ ಹೆಸರುವಾಸಿಯಾಗುತ್ತಿದೆ . ಹಾಸನದ ಪ್ರಜ್ವಲ್ ರೇವಣ್ಣ , ಎಚ್ ಡಿ ರೇವಣ್ಣ ಅಂತ ಸುದ್ದಿಗಳು ದಿನೇ ದಿನೇ ಕೇಳಿ ಸಾರ್ವಜನಿಕರು ದಂಗಾಗಿ ಹೋಗಿರುವಾಗ , ಇಲ್ಲೊಂದು ಇದೇ ಹೆಸರಿನ ರೇವಣ್ಣ ಲಾಡ್ಜ್ ಒಂದರಲ್ಲಿ ಮೈ ಮಾರಾಟಗಳ ಕೇಂದ್ರ ಸ್ಥಾನ ವಾಗುತ್ತಿರುವಾಗ ಸ್ಥಳೀಯ ಸಾರ್ವಜನಿಕರು ದಂಗಾಗಿದ್ದಾರೆ . ಲಾಡ್ಜ್ ಗಳಿಗಾಗಿ ಸರ್ಕಾರದ ಸುತ್ತೋಲೆ ,

ಸರ್ಕಾರದ ನಿಯಮಗಳನ್ನು ಗಾಳಿಗೆ ತೂರಿ , ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಫ್ಲೆಕ್ಸ ಬೋರ್ಡ್ ಗಳು ಇಟ್ಟುಕೊಂಡು ಆಕ್ರಮ ವಾಗಿ ಲೈಂಗಿಕ ಕ್ರಿಯೆಗೆ ಅಡ್ಡೆ , ತಾಣವಾಗುತ್ತಿರುವ ವಿಷಾದಕರ ಸಂಗತಿಯಾಗಿದೆ.

ನಗರದ ಸೋಮವಾರ ಪೇಟದಲ್ಲಿ ರೇವಣ್ಣ ಲಾಡ್ಜ್ ಹೆಸರಿನ ಲಾಜ್ ಒಂದರಲ್ಲಿ ಅಕ್ರಮವಾಗಿ ಲೈಂಗಿಕ ಚಟುವಟಿಕೆಗಳ ಸಲುವಾಗಿ ಅನ್ಯ ಕೋಮಿಗಳ ಜೋಡಿ ಒಂದು ತೆರಳುತ್ತಿರುವಾಗ ಒಂದು ಸಮುದಾಯದ ಜನ ಹಿಡಿದು, ಅಕ್ರಮ ಲೈಂಗಿಕ ಕ್ರಿಯೆಗಳ ತಾಣವಾಗುವುದನ್ನು ಸ್ಥಳೀಯ ನಾಗರಿಕರ ಗಮನಕ್ಕೆ ಬಂದು ಆಕ್ರೋಶಕ್ಕೆ ಕಾರಣವಾಗಿ




ಕೆಲವೊಂದು ಉದ್ವಿಗ್ನ ವಾತಾವರಣ ಸೃಷ್ಟಿಯಾಯಿತು. ಜನರನ್ನು ಚದುರಿಸಲು ಪೋಲೀಸರು ತಮ್ಮ ಲಾಠಿಗಳ ಮೂಲಕ ಹರಸಹಾಸ ಪಡಬೇಕಾಯಿತು.

ಅನ್ಯಕೋಮಿನ ಸೇರಿದ ಜೋಡಿಗಳು ಈಗ ಪೊಲೀಸರ ಅಧಿ–ತಿಯಾಗಿದ್ದಾರೆ. ಬನಹಟ್ಟಿ ನಗರದ ಪೊಲೀಸ್ ಠಾಣಾಧಿಕಾರಿ , ಈ ಅಕ್ರಮ ಅನೈತಿಕ ಚಟುವಟಿಕೆಗಳು ರಾಜಾರೋಷವಾಗಿ , ಯಾರ ಭಯವಿಲ್ಲದೆ ನಡೆಸುತ್ತಿರುವ, ಲಾಡ್ಜ್ ಮಾಲಿಕನನ್ನು ಕರೆದು ಯಾವ ರೀತಿ ಕಾನೂನು ಕ್ರಮ ಕೈಗೊಳ್ಳುತ್ತಾರೆ ಎಂದು ಸಾರ್ವಜನಿಕರು ಕಾದು ನೋಡುತ್ತಿದ್ದಾರೆ .

**ವರದಿ : ಮಹಿಬೂಬ್ ಎಂ ಬಾರಿಗಡ್ಡಿ**

# ಪಂಚಮಸಾಲಿ ಸಮುದಾಯದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

**ಬಾಗಲಕೋಟೆ:** ಪಂಚಮಸಾಲಿ ಸಮಾಜದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸುವ ಉದ್ದೇಶದಿಂದ, 2023–24 ನೆಯ ಸಾಲಿನಲ್ಲಿ ಎಸ್ ಎಸ್ ಎಲ್ ಸಿ ಮತ್ತು ಪಿ ಯು ಸಿ ಪರೀಕ್ಷೆಗಳಲ್ಲಿ ಪ್ರತಿಶತ 90 ಹಾಗೂ ಅದಕ್ಕಿಂತಲೂ ಹೆಚ್ಚು ಅಂಕ ಗಳಿಸಿ ಉತ್ತೀರ್ಣರಾಗಿ ರುವ ಬಾಗಲಕೋಟೆ ಜಿಲ್ಲೆಯ ಪಂಚಮಸಾಲಿ ಸಮಾಜದ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಿ ಸನ್ಮಾನಿಸಲಾಗುತ್ತಿದೆ.

ಪಿ. ಎಂ ಭಗವತಿ ,ಎಚ್ ಆರ್ ಕಮತರ ಹಾಗೂ ಶಾಂತಾ ಸಿಂಧೂರರವರ ಸ್ಮರಣಾರ್ಥ ಏರ್ಪಡಿಸಿರುವ ಪ್ರತಿಭಾ ಪುರಸ್ಕಾರಕ್ಕಾಗಿ ಬಾಗಲಕೋಟ ಜಿಲ್ಲೆಯ ಪಂಚಮಸಾಲಿ ಸಮಾಜದ ವಿದ್ಯಾರ್ಥಿಗಳು ತಮ್ಮ ಹೆಸರು ನೋಂದಾಯಿಸಲು ಶ್ರೀಶೈಲ ಕರಿಶಂಕರಿ ( 9886221520), ಒಂಬತ್ತನೆಯ ರಸ್ತೆ, ವಿದ್ಯಾಗಿರಿ, ಬಾಗಲಕೋಟ – 587102 ಅಥವಾ ಅಂತ್ಯೋದಯ ಸೌಹಾರ್ದ ಪತ್ತಿನ ಸಹಕಾರ ಸಂಘ (9113217275), ಒಂಬತ್ತನೆಯ ರಸ್ತೆ,ವಿದ್ಯಾಗಿರಿ, ಬಾಗಲಕೋಟೆ –587102 ರವರನ್ನು ಜೂನ್ 20ರೊಳಗೆ ಸಂಪರ್ಕಿಸಲು ಕೋರಲಾಗಿದೆ.

**–ಶ್ರೀಶೈಲ ಕರಿಶಂಕರಿ**

# ಕಳಪೆ ಕಾಮಗಾರಿಗೆ ಕ್ರಮ ಕೈಗೊಳ್ಳಲು ಸಂಸದ ಕಡಾಡಿ ಒತ್ತಾಯ

**ಮೂಡಲಗಿ :** ಬೆಳಗಾವಿ ಜಿಲ್ಲೆಯಲ್ಲಿ ಮಂಜೂರಾದ 4 ಪಶು ಆಸ್ಪತ್ರೆ ಕಟ್ಟಡಗಳ ಕಾಮಗಾರಿಗಳು ಕಳಪೆ ಮಟ್ಟದಿಂದ ಕೂಡಿ–ದ್ದು ಇದಕ್ಕೆ ಕಾರಣರಾದ ಅಧಿಕಾರಿಗಳು, ಗುತ್ತಿಗೆದಾರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸಿ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಲು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಅವರು ಪಶು ಪಾಲನಾ ಇಲಾಖೆಯ ಆಯುಕ್ತರನ್ನು ಒತ್ತಾಯಿಸಿದರು,



ಶುಕ್ರವಾರದಂದು ಪಟ್ಟಣದ ಪಶು ಪಾಲನಾ ಇಲಾಖೆಯ ಆವರಣದಲ್ಲಿ ಬೆಂಗಳೂರಿನ ಕರ್ನಾಟಕ ಸ್ಟೇಟ ಹ್ಯಾಬಿಟೇಟ ಸೆಂಟರ ಇವರ ಸಂಸ್ಥೆಗೆ ಮಂಜೂರಾದ ರೂ 50.13 ಲಕ್ಷ ವೆಚ್ಚದಲ್ಲಿ ಚಿಕಿತ್ಸಾಲಯ ಮತ್ತು ಪಶು ಆಸ್ಪತ್ರೆಯ ನೂತನ ಕಟ್ಟಡ ಸ್ಥಳಕ್ಕೆ ಭೇಟಿ ನೀಡಿ ಸುದ್ದಿಗಾರರೊಂದಿಗೆ ಮಾತನಾಡಿ, ಈ ಕಟ್ಟಡಕ್ಕೆ ಸಮರ್ಪಕವಾದ ರೀತಿಯಲ್ಲಿ ಸಾಮಗ್ರಿಗಳನ್ನು ಬಳಸದೆ ಕಾಟಾಚಾರಕ್ಕಾಗಿ ಕಾಮಗಾರಿಮಾಡುತ್ತಿದ್ದರುಮೇಲ್ವಿಚಾರಕರು ಏನು ಕೆಲಸ ಮಾಡುತ್ತಿದ್ದಾರೆ..? ಸೈಟಿಗೆ ಬಂದು ವೀಕ್ಷಣೆ ಮಾಡಲು ಆಗೋದಿಲ್ಲ ಇಂದು ಮೇಲ್ವಿಚಾರಕರಿಗೆ ಹಾಗೂ ಕಳಪೆ ಮಟ್ಟದ ಕಾಮಗಾರಿ ಮಾಡಿದ ಗುತ್ತಿಗೆದಾರನಿಗೆ ಕ್ಲಾಸ್ ತೆಗೆದುಕೊಂಡ ಘಟನೆ ಜರುಗಿತು. ಜಿಲ್ಲೆಯ ಮೂಡಲಗಿ, ಖಿನಗಾಂವ, ಯರಗಟ್ಟಿ ಹಾಗೂ ಕಿತ್ತೂರನಲ್ಲಿ ಆರ್.ಐ.ಡಿ.ಎಫ್ ಟ್ರಾಂಚ್–28 ಯೋಜನೆಯಡಿ ಪಶು ಚಿಕಿತ್ಸಾಲಯ ಮತ್ತು ಪಶು ಆಸ್ಪತ್ರೆಗಳ ನೂತನ ಕಟ್ಟಡ ನಿರ್ಮಾಣ ಕಾಮಗಾರಿಯನ್ನು 199.13 ಲಕ್ಷ ರೂಪಾಯಿಗಳ ಅನುದಾನದಲ್ಲಿ ರಾಜ್ಯ ಸರ್ಕಾರಿ ಸ್ವಾಮ್ಯದ ನಿರ್ಮಾಣ ಸಂಸ್ಥೆಯಾದ ಕರ್ನಾಟಕ ಸ್ಟೇಟ್ ಹ್ಯಾಬಿಟೇಟ್ ಸೆಂಟರ್ ಬೆಂಗಳೂರು ಈ ಸಂಸ್ಥೆಗೆ ಮಂಜೂರಾತಿ ನೀಡಲಾಗಿದ್ದು. ಪಶು ಚಿಕಿತ್ಸಾಲಯ ಮತ್ತು ಪಶು ಆಸ್ಪತ್ರೆಗಳ ನೂತನ ಕಟ್ಟಡ ನಿರ್ಮಾಣ ಕಾಮಗಾರಿಯು ಸರ್ಕಾರದ ಮಹಾತ್ವಾಕಾಂಕ್ಷೆ ಯೋಜನೆಯಾಗಿದೆ ಎಂದರು.

ಆದರೇ ಸದರಿ ಕಾಮಗಾರಿಯನ್ನು ನಿಗದಿತ ಕಾಲಾವಧಿ ಹಾಗೂ ಪೂರ್ಣ ಗುಣಮಟ್ಟದಲ್ಲಿ ನಿರ್ಮಾಣ ಮಾಡುವ ಜವಾಬ್ದಾರಿಯು ಸಂಬಂಧಿಸಿದ ಗುತ್ತಿಗೆದಾರದ್ದಾಗಿದ್ದು, ಸದರಿ ಗುತ್ತಿಗೆದಾರ ಸಂಸ್ಥೆಯವರು ಇದನ್ನು ಆಗಸ್ಟ್ 2023 ರಲ್ಲಿ ಪ್ರಾರಂಭಗೊಳಿಸಿ ಜುಲೈ 2024 ರಲ್ಲಿ ಮುಕ್ತಾಯಗೊಳಿಸುವ ನಿಬಂಧನೆಗೆ ಒಳಪಟ್ಟು ಕಾಮಗಾರಿಯನ್ನು ಪಡೆದುಕೊಂಡಿದ್ದಾರೆ. ಆದರೆ ಸದರಿ ಕಾಮಗಾರಿಯನ್ನು ಸಂಬಂಧಿಸಿದ ಗುತ್ತಿಗೆದಾರರು ಕಳೆದ ಆರು ತಿಂಗಳಿಂದ ಅರ್ಧಕ್ಕೆ ಸ್ಥಗಿತಗೊಳಿಸಿದ್ದು, ಅದೂ ಅಲ್ಲದೆ ಈಗಾಗಲೇ ಕೈಗೊಂಡಿರುವ ಕಾಮಗಾರಿಯು ತೀರಾ ಕಳಪೆ ಮಟ್ಟದಲ್ಲಿ ನಿರ್ಮಿಸಿದ್ದಾರೆ. ಕ್ಯೂರಿಂಗ್ ಕಾರ್ಯವನ್ನು ಸರಿಯಾಗಿ ನಿರ್ವಹಿಸಿಲ್ಲ, ಇದರಿಂದಾಗಿ ಕಟ್ಟಡದ ಹಲವು ಭಾಗಗಳಲ್ಲಿ ಬಿರುಕು ಬಿಟ್ಟು, ಕಟ್ಟಡ ಸಂಪೂರ್ಣವಾಗಿ ಕುಸಿದು ಬೀಳುವ ಹಂತದಲ್ಲಿ ಇರುವುದರಿಂದ ಸಾರ್ವಜನಿಕರ ಹಾಗೂ ಜಾನುವಾರುಗಳಿಗೆ ಜೀವ ಹಾನಿಯಾಗುವ ಸಂಭವಿಸಬಹುದು ಎಂದು ವಿಷಾದ ವ್ಯಕ್ತಪಡಿಸಿದರು.

ಈಗಾಗಲೇ ಪಶು ಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಆಯುಕ್ತರಿಗೆ ಮತ್ತು ಅಪರ ನಿರ್ದೇಶಕರಿಗೆ ಸದರಿ ಕಟ್ಟಡದ ಕಾಮಗಾರಿಗಳನ್ನು ದುರಸ್ತಿಗೊಳಸದೇ ಸಂಪೂರ್ಣವಾಗಿ ನೆಲಸಮಗೊಳಿಸಿ ಹೊಸ ಕಟ್ಟಡದ ಕಾಮಗಾರಿಯನ್ನು ಸದರಿ ಗುತ್ತಿಗೆ ಸಂಸ್ಥೆಯ ವರಿಂದಲೇ ನಿರ್ಮಿಸುವಂತೆ ಆದೇಶಿಸಲು ಹಾಗೂ ಗುತ್ತಿಗೆದಾರ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸುವಂತೆ ಹಾಗೂ ಇದ–ಕ್ಕೆ ಸಂಬಂಧಿಸಿದ ಅಧಿಕಾರಿಗಳ ವಿರು ದ್ಧ ಯಾವುದೇ ಮುಲಾಜಯಿಲ್ಲದೇ ಕ್ರಮಕೈಕೊಳ್ಳಬೇಕೆಂದು ಪತ್ರ ಬರೆಯಲಾಗಿದೆ ಎಂದರು.

ಈ ಸಮಯದಲ್ಲಿ ಪಶು ಇಲಾಖೆಯ ಪಾಲಿ ಕ್ಲೀನಿಕ್ ಉಪ ನಿರ್ದೇಶಕ ಡಾ ಎಮ್ ಬಿ ವಿಭೂತಿ, ಸಹಾಯಕ ನಿರ್ದೇಶಕ ಡಾ ಮೋಹನ ಕಮತ, ಡಾ ಮಹಾದೇವ ಕೌಜಲಗಿ. ಇಲಾಖೆಯ ಸಿಬ್ಬಂದಿ ಸುರೇಶ ಆದಪ್ಪಗೋಳ, ಮಹಾಂತೇಶ ಹೊಸೂರ, ಶಂಕರ ಶಾಬನ್ನವರ, ಶಿವರುದ್ರ ಮೇಲಾನಟ್ಟಿ, ಮುಖಂಡರಾದ ಬಸವರಾಜ ಪಾಟೀಲ್, ಮಲ್ಲಪ್ಪ ನೇಮಗೌಡರ, ಡಾ ಬಿ ಎಮ್ ಪಾಲಬಾಂವಿ, ಮಹಾನಿಂಗ ವಂಟಗೋಡಿ, ಈರಪ್ಪ ಡವಳೇಶ್ವರ, ಕುಮಾರ ಗಿರಡ್ಡಿ ಸಹಿತ ಹಲವರು ಇದ್ದರು,

# ಗುಣಾತ್ಮಕ ಶಿಕ್ಷಣವೇ ನಮ್ಮ ಗುರಿ: ಗಿರೆಣ್ಣವರ



**ಮೂಡಲಗಿ :** ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ ನೀಡುವದೇ ನಮ್ಮ ಇಲಾಖೆಯ ಮೂಲ ಉದ್ದೇಶವಾಗಿದೆ ಅದಕ್ಕಾಗಿಯೇ ಈ ಶೈಕ್ಷಣಿಕ ವರ್ಷವನ್ನು ಗುಣಾತ್ಮಕ ಶೈಕ್ಷಣಿಕ ವರ್ಷ ಎಂದು ಆಚರಿಸಲಾಗುತ್ತಿದೆ ಎಂದು ಮುಖ್ಯಾದ್ಯಾಪಕ ಎ.ವ್ಹಿ. ಗಿರೆಣ್ಣವರ ಹೇಳಿದರು.

ತುಕ್ಕಾನಟ್ಟಿಯ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಕನ್ನಡ ಶಾಲೆಯಲ್ಲಿ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಬರಮಾಡಿಕೊಂಡು ಮಾತನಾಡುತ್ತಿದ್ದರು. ಶಿಕ್ಷಣ ಇಲಾಖೆ ಸರಕಾರಿ ಶಾಲೆಗಳ ವಿದ್ಯಾರ್ಥಿಗಳಿಗಾಗಿ ಹಲವಾರ ಶೈಕ್ಷಣಿಕ ಸೌಲಭ್ಯಗಳು ಮೂಲಭೂತ ಸೌಕರ್ಯಗಳನ್ನು ಕೊಡುತ್ತಿರುವದಷ್ಟೇ ಅಲ್ಲದೇ ಗುಣಾತ್ಮಕ ಶಿಕ್ಷಣವನ್ನು ನೀಡಲಾಗುತ್ತಿದೆ.

ವಿದ್ಯಾರ್ಥಿಗಳು ಹಾಗೂ ಪಾಲಕರು ಸರಕಾರಿ ಶಾಲೆಗಳಲ್ಲಿ ಮಕ್ಕಳನ್ನು ದಾಖಲು ಮಾಡುವದರ ಮೂಲಕ ಗುಣಾತ್ಮಕ ಶಿಕ್ಷಣ ಹಾಗೂ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು ಸರಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ಮಗು ಬದುಕಿನ ಎಲ್ಲಾ ಆಯಾಮಗಳನ್ನು ಕಲಿತುಕೊಂಡು ಸಮಾಜದಲ್ಲಿ ಆತ್ಮವಿಶ್ವಾಸವುಳ್ಳ ಪ್ರಜೆಯಾಗಿ ಬದುಕುತ್ತಾನೆ. ಇದೇ ನಮ್ಮ ಶಿಕ್ಷಣದ ಗುರಿ. ಸರಕಾರಿ ಶಾಲೆಗಳಲ್ಲಿ ಎಲ್ಲವನ್ನೂ ಉಚಿತವಾಗಿ ನೀಡುತ್ತಿರುವ ಉದ್ದೇಶ ಎಲ್ಲರೂ ತಮ್ಮ ಬದುಕನ್ನು ಕಟ್ಟಿಕೊಳ್ಳಬೇಕೆಂಬುದೇ ಆಗಿದೆ.

ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಪುಷ್ಪ ಹಾಗೂ ಸಿಹಿಯೂಟ (ಬಾಲೂಶಾ) ಬೂಸ್ಟ್ ನೀಡುವದರ ಮೂಲಕ ಸ್ವಾಗತಿಸಿ ಎಲ್ಲಾ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕಗಳನ್ನೂ ಕೂಡ ವಿತರಿಸಲಾಯಿತು. ಪ್ರಾರಂಭೋತ್ಸವ ಸಂದರ್ಭದಲ್ಲಿ ಒಂದನೇ ತರಗತಿಗೆ ಹೊಸದಾಗಿ ಸುಮಾರು ಎಪ್ಪತ್ತು ಮಕ್ಕಳನ್ನು ದಾಖಲಿಸಿಕೊಳ್ಳಲಾಯಿತು. ಇದೇ ಕಾರ್ಯಕ್ರಮದಲ್ಲಿ ನಿವೃತ್ತಿಯಾಗುತ್ತಿರುವ ಶಿಕ್ಷಕರಾದ ಎಸ.ಡಿ. ಲಮಾಣಿ ಅವರನ್ನು ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಶಿಕ್ಷಕರಾದ ಕುಸುಮಾ ಚಿಗರಿ, ವಿಮಲಾಕ್ಷಿ ತೋರಗಲ್, ಪುಷ್ಪಾ ಭರಮದೆ, ಶಂಕರ ಲಮಾಣಿ, ಬಸವರಾಜ ನಾಯಕ, ಪ್ರಿಯಾಂಕಾ ಡಿ.ಕೆ. ಸೋಮಶೇಖರ ವಾಯ್.ಆರ್., ಚನ್ನಬಸಪ್ಪ ಸೀರಿ, ಸುಜಾತಾ ಕೋಳಿ, ರೂಪಾ ಹೂಲಿಕಟ್ಟಿ, ಲಕ್ಷ್ಮೀ ಹೆಬ್ಬಾಳ ಹಾಗೂ ಅತಿಥಿ ಶಿಕ್ಷಕರಾದ ಖಾತೂನ ನದಾಫ, ಶಿವಲೀಲಾ ಹುಲಕುಂದ, ಹೊಳೆಪ್ಪಾ ಗದಾಡಿ ಭಾಗವಹಿಸಿದ್ದರು. ಶಿಕ್ಷಕರಾದ ಮಹಾದೇವ ಗೋಮಾಡಿ ಕಾರ್ಯಕ್ರಮ ನಿರೂಪಿಸಿದರು.

# ಸದೃಢ ಯುವಕರು ದೇಶದ ಸಂಪತ್ತು: ಜಿ.ಎನ್. ಪಾಟೀಲ

**ಬಾಗಲಕೋಟೆ :** ದೇಶವನ್ನುಕಟ್ಟುವಲ್ಲಿ ಸದೃಢಯುವಕರ ಪಾತ್ರಅತ್ಯಂತ ಮಹತ್ವದ್ದಾಗಿದೆ. ಅದಕ್ಕೆ ವಿದ್ಯಾರ್ಥಿಗಳು ದೇಶವನ್ನುರೂಪಿಸುವ ರೂವಾರಿಗಳಾಗಿದ್ದಾರೆ ಅವರಿಗೆ ಸೂಕ್ತವಾದತರಬೇತಿ ನೀಡಿಅವರನ್ನುದೇಶದ ಮುಖ್ಯವಾಹಿನಿಗೆ ತರುವಕಾರ್ಯವನ್ನು ಶಿಬಿರಗಳು ಮಾಡುವ ಮೂಲಕ ಸದೃಢಯುವಕರದೇಶದ ಸಂಪತ್ತಾಗುವಂತೆ ಶಾಲಾ ಕಾಲೇಜುಗಳು ಶ್ರಮವಹಿಸಬೇಕೆಂದು ಭಾರತ ಸ್ಕೌಟ್ಸ್ ಮತ್ತುಗೈಡ್ಸ್‌ಜಿಲ್ಲಾಉಪಾಧ್ಯಕ್ಷರಾದ ಜಿ.ಎನ್.ಪಾಟೀಲ ಹೇಳಿದರು.



ಅವರು ನವನಗರ ಸರ್ಕಾರಿ ಪ್ರಥಮದರ್ಜೆಕಾಲೇಜಿನಲ್ಲಿ ನಡೆದಭಾರತ ಸ್ಕೌಟ್ಸ್&ಗೈಡ್ಸ್ ಬುದ್ಧರೋವರ್ಸ ಮತ್ತು ಸೇವಾಭಾರತಿರೇಂಜರ್ಸ ಘಟಕಗಳು, ರೇಡ್‌ಕ್ರಾಸ್, ಎನ್.ಸಿ.ಸಿ, ಎನ್.ಎಸ್.ಎಸ್ ಮತ್ತುಜಿಲ್ಲಾಆಸ್ಪತ್ರೆ ಸಹಯೋಗದಲ್ಲಿರಕ್ತದಾನ ಶಿಬಿರವನ್ನು ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಇಂತಹ ಶಿಬಿರಗಳು ವಿದ್ಯಾರ್ಥಿಗಳಲ್ಲಿ ದೇಶಕಟ್ಟುವ ಮನೋಭಾವವನ್ನು ಬೆಳೆಸುತ್ತವೆ ಇದರಿಂದದೇಶಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಮುನ್ನಡೆಯಲು ಸಾಧ್ಯವಾಗುತ್ತದೆಎಂದು ಹೇಳಿದರು.

ಕಾರ್ಯಕ್ರಮದಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯಡಾ.ಅರುಣಕುಮಾರ ಗಾಳಿ ಅವರು ವಿದ್ಯಾರ್ಥಿಗಳು ತಮ್ಮಜೀವನದಲ್ಲಿಯೋಗ ಮತ್ತುಯೋಗ್ಯತೆಯನ್ನು ಗಳಿಸಿಕೊಂಡು ಅಪೇಕ್ಷಿತ ಕಾರ್ಯಗಳನ್ನು ಮಾಡಿದಾಗಅದರ ಫಲ ಯೋಗ್ಯವಾಗಿರುತ್ತದೆಅಂತಹಯೋಗ ವ ಎತ್ತುಯೋಗ್ಯತೆಯನ್ನುಗಳಿಸಲು ಶಿಬಿರಗಳು ಸಹಕಾರಿಯಾಗುತ್ತವೆಅದಕ್ಕಾಗಿಇಂತಹ ಶಿಬಿರಗಳಲ್ಲಿ ವಿದ್ಯಾರ್ಥಿಗಳು ಆಸಕ್ತಿಯಿಂದ ಪಾಲ್ಗೊಂಡು, ಶಿಬಿರದ ಸದಪಯೋಗ ಪಡೆಯುವಂತೆಕರೆ ನೀಡಿದರು.

ಕಾರ್ಯಕ್ರಮದಲ್ಲಿಮುಖ್ಯ ಅತಿಥಿಗಳಾಗಿ ಆಗಮಿಸಿದ ಭಾರತ ಸ್ಕೌಟ್ಸ್ ಮತ್ತುಗೈಡ್ಸ್‌ಜಿಲ್ಲಾ ಕಾರ್ಯದರ್ಶಿಗಳಾದ ಎಸ್.ಎಸ್.ದಳವಾಯಿ ಅವರು ಮಾತನಾಡಿ ಶಿಬಿರದ ಉದ್ದೇಶ ಮತ್ತು ಸೌಲಭ್ಯಗಳ ಕುರಿತು ಮಾಹಿತಿ ನಿಡಿದರು.

ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ವಿಭಾಗ ಸಂಚಾಲಕರಾದಡಾ.ಜಿ.ಜಿ ಹಿರೇಮಠಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ವೇದಿಕೆಯಲ್ಲಿರೆಡ್‌ಕ್ರಾಸ್, ಎನ್.ಸಿ.ಸಿ, ಎನ್.ಎಸ್.ಎಸ್. ರೇಂಜರ್ಸ, ರೋವರ್‍ಸ ಘಟಕಗಳ ಸಂಚಾಲಕರಾದ ನೀಲಪ್ಪಕುರಿ, ಡಾ.ಭಾಸ್ಕರ ಮುಂಡೆವಾಡಿ, ಶಶಿಧರ ಕುಂಬಾರ, ಡಾ.ಸುಮಂಗಲಾ ಮೇಟಿ, ಪರಸಪ್ಪ ತಳವಾರ ಉಪಸ್ಥಿತರಿದ್ದರು.

ಶಿಬಿರದ ಪ್ರಥಮ ದಿನದಂದು ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿಒಟ್ಟು 22 ವಿದ್ಯಾರ್ಥಿಗಳು ರಕ್ತದಾನ ಮಾಡಿದರು.

ಕುಮಾರಿಜ್ಯೋತಿಕೊಟಿಕಲ್ಲ ಹಾಗೂ ಸಂಗಡಿಗರು ಪ್ರಾರ್ಥಿಸಿದರು, ಡಾ.ಸುಮಂಗಲಾ ಮೇಟಿ ಸ್ವಾಗತಿಸಿದರು, ಪರಸಪ್ಪ ತಳವಾರ ವಂದಿಸಿದರು, ಡಾ.ಚಂದ್ರಶೇಕರ ಕಾಳನ್ನವರ ನಿರೂಪಿಸಿದರು.

# ಸೈದಾಪೂರ ಸರ್ಕಾರಿ ವಸತಿ ಶಾಲೆಗೆ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

**ಧಾರವಾಡ :** ಧಾರವಾಡ ತಾಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ವಸತಿ ಶಾಲೆ, ಸೈದಾಪೂರ, ಇಲ್ಲಿನ ಖಾಲಿ ಇರುವ ಸ್ಥಾನಗಳಿಗೆ ಅನುಗುಣವಾಗಿ ಭರ್ತಿ ಮಾಡಲು 01 ನೇ ತರಗತಿಯಿಂದ 05 ನೇ ತರಗತಿವರೆಗಿನ ಅರ್ಹ ಪ.ಜಾತಿ, ಪ.ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನಿಗಧಿತ ಅರ್ಜಿ ಫಾರ್ಮಗಳನ್ನು ಧಾರವಾಡ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರ ಕಛೇರಿ ಅಥವಾ ಸರ್ಕಾರಿ ವಸತಿ ಶಾಲೆ. ಸೈದಾಪೂರ ಧಾರವಾಡದಲ್ಲಿ ಉಚಿತವಾಗಿ ಪಡೆದುಕೊಳ್ಳಬಹುದು. ಪ್ರವೇಶ ಬಯಸುವ ವಿದ್ಯಾರ್ಥಿಗಳು ನಿಗಧಿತ ಅರ್ಜಿ ನಮೂನೆಯಲ್ಲಿ ಮಾಹಿತಿಯನ್ನು ಸ್ಪಷ್ಟವಾಗಿ ಭರ್ತಿ ಮಾಡಿ, ಸಂಬಂಧಿಸಿದ ದಾಖಲಾತಿಗಳೊಂದಿಗೆ ಧಾರವಾಡ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರ ಕಾರ್ಯಾಲಯಕ್ಕೆ ಜೂನ್ 15, 2024 ರ ಸಂಜೆ: 5.30 ರೊಳಗಾಗಿ ಸಲ್ಲಿಸಬೇಕೆಂದು ಪ್ರಕಟಣೆ ತಿಳಿಸಿದೆ.

# ವಿದ್ಯಾರ್ಥಿಗಳು ನಿರಂತರ ಪ್ರಯತ್ನ, ಪರಿಶ್ರಮದಿಂದ ಸಾಧನೆ ಮಾಡಬೇಕು





**ಮುಧೋಳ :** ಬದುಕಿನ ದಾರಿಯಲ್ಲಿ ಅನೇಕ ಸಂಕಟಗಳು ಎದುರಾಗುತ್ತವೆ. ಭವಸಾಗರ ದಾಟುವ ದಾರಿಯಲ್ಲಿಯೂ ಕಷ್ಟಗಳು ಸಾಕಷ್ಟಿವೆ. ವಿದ್ಯಾರ್ಥಿಗಳು ಕೌಶಲ್ಯ ಬೆಳೆಸಿಕೊಳ್ಳಬೇಕು. ನಿರಂತರ ಪ್ರಯತ್ನ, ಪರಿಶ್ರಮದಿಂದ ಸಾಧನೆ ಮಾಡಬೇಕು. ಉದ್ಯಮಶೀಲ, ಕ್ರಿಯಾಶೀಲ, ಸಾಹಸ, ಧೈರ್ಯ, ಆತ್ಮವಿಶ್ವಾಸ, ಬುದ್ಧಿಶಕ್ತಿ, ಪರಾಕ್ರಮದೊಂದಿಗೆ ಏನನ್ನಾದರೂ ಗೆಲ್ಲಲು ಸಾಧ್ಯವಿದೆ ಎಂದು ಹಳೇ ಹುಬ್ಬಳ್ಳಿ ಶ್ರೀ ನೀಲಕಂಠ ಮಠದ ಜಗದ್ಗುರು ಶಿವಶಂಕರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಮುಧೋಳ ತಾಲೂಕಾ ಕಸಾಪ ಸಭಾಭವನದಲ್ಲಿ ಭಾನುವಾರ ಮುಧೋಳ ತಾಲೂಕಾ ಕುರುಹಿನಶೆಟ್ಟಿ ನೇಕಾರ ಸಮಾಜ ಅಭಿವೃದ್ಧಿ ಸಂಘದ ದ್ವಿತೀಯ ವಾರ್ಷಿಕೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದ ಸಾನಿಧ್ಯ ವಹಿಸಿ, ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು ಸಾಧನೆ ಮಾಡುವವರಿಗೆ ಭಗವಂತನೇ ಸಹಾಯ ಮಾಡುತ್ತಾನೆ. ಮೊಬೈಲ್‌ಅತೀಯಾದ ಬಳಕೆಯಿಂದ ಮಕ್ಕಳು ಕೆಡುವ ಸಂಭವವಿದೆ. ಒಳ್ಳೆಯ ಪುಸ್ತಕಗಳ ಓದುವ ಅಭ್ಯಾಸದಿಂದ, ಉತ್ತಮ ಹವ್ಯಾಸಗಳಿಂದ ವಿದ್ಯಾರ್ಥಿಗಳು ಸಾಧನೆ ಮಾಡಿ, ಕೀರ್ತಿವಂತರಾಗಬೇಕು. ಶಿಸ್ತುಬದ್ಧ ಜೀವನ ಅವಶ್ಯಎಂದು ಪೂಜ್ಯರು ಹೇಳಿದರು.

ಕುರುಹಿನಶೆಟ್ಟಿ ಸಮಾಜದ ತಾಲೂಕಾ ಅಧ್ಯಕ್ಷ ರುದ್ರಪ್ಪ ಜಾಡರ ಅಧ್ಯಕ್ಷತೆ ವಹಿಸಿ ಆರ್ಥಿಕವಾಗಿ ಸಮಾಜ ಬಾಂಧವರಿಗೆ ನೆರವಾಗಲು ಸಹಕಾರಿ ಸಂಘ ಸ್ಥಾಪಿಸಲು ಯೋಜನೆ ರೂಪಿಸಿದ್ದು ಎಲ್ಲರ ಸಹಕಾರ ಅವಶ್ಯ ಎಂದರು.

ರಬಕವಿ–ಬನಹಟ್ಟಿ ತಾಲೂಕಾ ಕಸಾಪ ಅಧ್ಯಕ್ಷ ಮ.ಕೃ. ಮೇಗಾಡಿ, ಮುಧೋಳದ ಹಿರಿಯ ಪತ್ರಕರ್ತ ಅಶೋಕ ಕುಲಕರ್ಣಿ, ಕುರುಹಿನಶೆಟ್ಟಿ ಸಮಾಜದ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಮಹಾಲಿಂಗಪ್ಪ ಕಲ್ಲೋಳ್ಳಿ, ಜಿಲ್ಲಾ ಸಮಿತಿ ನಿರ್ದೇಶಕ ಈರಪ್ಪ ಹಳಕಟ್ಟಿ, ಮುಧೋಳ ತಾಲೂಕಾ ಸಂಚಾಲಕ ಸದಾಶಿವ ಹಳ್ಳೂರ, ಪರಪ್ಪ ಹಳಿಂಗಳಿ, ಶ್ರೀಶೈಲ ಚಿಂಚಖಂಡಿ ಬೆಳಗಲಿ, ಶಶಿ ಬೆಳ್ಳೂರ, ಚಿದಾನಂದ ಚಿಂಚಖಂಡಿ ಅವರನ್ನು ಸಮಾರಂಭದಲ್ಲಿ ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಪ್ರತಿಶತ 85ಕ್ಕಿಂತ ಹೆಚ್ಚಿನ ಸಾಧನೆಗೈದ ಮುಧೋಳ ತಾಲೂಕಿನ ಕುರುಹಿನಶೆಟ್ಟಿ ಸಮಾಜದ ಎಸ್‌ಎಸ್‌ಎಲ್ ಸಿ ಹಾಗೂ ಪಿಯುಸಿ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನಡೆಯಿತು.

**ಎಸ್‌ಎಸ್‌ಎಲ್‌ಸಿ ಸಾಧಕರು:** ಲಕ್ಷ್ಮಿ ಚಿಂಚಖಂಡಿ, ಸೌಂದರ್ಯ ಬೆಳ್ಳುಬ್ಬಿ, ಕಿಶನ್ ಗೋಲಭಾವಿ, ನವೀನ್ ಯಡಪ್ಪನವರ, ಮಾನಸಾ ಹಳ್ಳೂರ, ಲಕ್ಷ್ಮಿ ಮಳಲಿ, ಮಂಜುನಾಥ ವಂಟಗೋಡಿ, ಪುನೀತ್ ಬೀಳಗಿ, ಆಕಾಶ ಮನ್ನಿ, ವಿನೋದ ಬಾದರದಿನ್ನಿ. ಅವರಿಗೆ ಹಾಗೂ ಪಿಯುಸಿ ಸಾಧಕರಾದ ವೀರೇಶ ಮನ್ನಿ, ಅನುರಾಧಅರ್ಜುನಗಿ, ಮಲ್ಲೇಶ್ ಹಳಕಟ್ಟಿ, ಲಕ್ಷ್ಮಿ ಬಾದರದಿನ್ನಿ, ಅನುಶಾ ಲಂಗೋಟಿ, ಮುತ್ತಪ್ಪ ಹಳಕಟ್ಟಿ, ಅಪೂರ್ವಅರ್ಜುನಗಿ ಅವರನ್ನು ಸನ್ಮಾನಿಸಲಾಯಿತು.

ಶ್ರೀ ನೀಲಕಂಠೇಶ್ವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿತು. ಹಿರಿಯರಾದ ಅಮರಪ್ಪ ಉಣಚಗಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಾನಸಾ ಹಳ್ಳೂರ, ಮೇಘಾ ಹಳ್ಳೂರ ಪ್ರಾರ್ಥಿಸಿದರು. ಈರಣ್ಣ ಬಾದರದಿನ್ನಿ ಸ್ವಾಗತಿಸಿದರು. ಬೆಳಗಲಿ ಸಿಆರ್‌ಪಿ ಮಲ್ಲಿಕಾರ್ಜುನ ಅರಬಿ ನಿರೂಪಿಸಿದರು. ಪತ್ರಕರ್ತ ಅವಿನಾಶ ಕೋಷ್ಠಿ ವಂದಿಸಿದರು.




ಮುಧೋಳ ತಾಲೂಕಿನ ಹಿರೇ ಆಲಗುಂಡಿಯಲ್ಲಿ ರಾಷ್ಟ್ರೀಯ ಬಸವ ಚಿಂತನ ಬಳಗವು ಆಯೋಜಿಸಿದ 8 ನೇ ಶಿವಾನುಭವದ ದೃಶ್ಯ.

# ಸಂಚಾರ ನಿಯಮ ಪಾಲನೆ ಪ್ರಜ್ಞಾವಂತ ನಾಗರಿಕರ ಮೊದಲ ಕರ್ತವ್ಯ: ಪೊಲೀಸ್ ಆಯುಕ್ತೆ ರೇಣುಕಾ ಸುಕುಮಾರ

**ಧಾರವಾಡ :** ಪ್ರತಿ ವರ್ಷ ಅನೇಕ ವಾಹನ ಸವಾರರು ಹಾಗೂ ಸಂಚಾರಿಗಳು ಸಂಚಾರಿ ನಿಯಮ ಉಲಂಘನೆಯಿಂದ ಅಮಾಯಕವಾಗಿ ಜೀವ ಕಳೆದುಕೊಳ್ಳುತ್ತಾರೆ. ಸಂಚಾರ ನಿಯಮಗಳನ್ನು ಪಾಲಿಸುವುದು ಪ್ರಜ್ಞಾವಂತ ನಾಗರಿಕರ ಮೊದಲ ಕರ್ತವ್ಯವಾಗಿದೆ ಎಂದು ಹುಬ್ಬಳ್ಳಿ– ಧಾರವಾಡ ಮಹಾನಗರ ಪೊಲೀಸ್ ಆಯುಕ್ತರಾದ ರೇಣುಕಾ ಸುಕುಮಾರ ಅವರು ಹೇಳಿದರು.



ಅವರು ಧಾರವಾಡ ನಗರದ ಆಲೂರು ವೆಂಕಟರಾವ್ (ಜುಬ್ಲಿ ಸರ್ಕಲ್) ವೃತ್ತದಲ್ಲಿ ಸಂಚಾರ ನಿಯಮಗಳ ಸಾರ್ವಜನಿಕ ಜಾಗೃತಿ ಹಾಗೂ ದೋಷಪೂರಿತ ಸೈಲೆನ್ಸರ್‌ಗಳ ನಾಶಪಡಿಸುವ ಕಾರ್ಯಕ್ಕೆ ಚಾಲನೆ ನೀಡಿ, ಮಾತನಾಡಿದರು.

ಸಂಚಾರ ನಿಯಮಗಳ ಕುರಿತು ಪ್ರತಿ ವರ್ಷ ವಿವಿಧ ಕಾರ್ಯಕ್ರಮಗಳ ಮೂಲಕ ಶಾಲಾ ಕಾಲೇಜುಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಜನಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಆದರೂ ವಾಹನ ಸವಾರರು ಸರಿಯಾಗಿ ಹೆಲ್ಮೆಟ್ ಧರಿಸುವುದಿಲ್ಲ, ಸೀಟ್ ಬೆಲ್ಟ್ ಧರಿಸುವುದಿಲ್ಲ, ಸಿಗ್ನಲ್ ಜಂಪ್ ಮಾಡುವುದು, ಸಂಚಾರಿ ಸಾಮಾನ್ಯ ನಿಯಮಗಳನ್ನು ಸಹ ಪಾಲಿಸುವುದಿಲ್ಲ. ಇದರಿಂದಾಗಿ ತಮ್ಮ ಅಮೂಲ್ಯ ಜೀವವನ್ನೇ ಕಳೆದುಕೊಳ್ಳುತ್ತಾರೆ ಎಂದು ಅವರು ತಿಳಿಸಿದರು.

ಅವಳಿ ನಗರದಲ್ಲಿ ವಾಹನ ದಟ್ಟಣೆ ಮಾರ್ಗಗಳನ್ನು ಗುರುತಿಸಲಾಗಿದೆ. ಅವುಗಳಿಗೆ ಪರ್ಯಾಯ ವ್ಯವಸ್ಥೆ ಮಾಡುವ ಕುರಿತು ಪರಿಶೀಲಿಸಲಾಗುತ್ತಿದೆ. ಪಾಲಕರು 18 ವರ್ಷ ದೊಳಗಿನ ಮಕ್ಕಳಿಗೆ ವಾಹನ ಚಾಲನೆಗೆ ನೀಡಬಾರದು. ಇದು ಅಪರಾಧವಾಗಿದ್ದು, ಅಂತ ಪಾಲಕರಿಗೆ ರೂ. 25 ಸಾವಿರ ದಂಡ ಮತ್ತು ಜೈಲುವಾಸದ ಶಿಕ್ಷೆ ಇದೆ. ಸಾರ್ವಜನಿಕರ ಸಹಕಾರದಿಂದ ಮಾತ್ರ ಸುಗಮ ಮತ್ತು ಸುಸೂತ್ರ ಸಂಚಾರ ಹೊಂದಲು ಸಾಧ್ಯವಾಗುತ್ತದೆ ಎಂದು ಅವರು ತಿಳಿಸಿದರು.

ಧಾರವಾಡ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮೋಟಾರ್ ಸೈಕಲ್ ಸವಾರರು ತಮ್ಮ ವಾಹನಗಳಿಗೆ ಅನಧೀಕೃತವಾಗಿ ದೋಷಪೂರಿತ ಕರ್ಕಶ ಶಬ್ದವನ್ನು ಉಂಟು ಮಾಡುವ ಸೈಲೆನ್ಸರ್‌ಗಳನ್ನು ಹಾಕಿಕೊಂಡು, ಸಂಚರಿಸಿ ಸಾರ್ವಜನಿಕರಿಗೆ ತೊಂದರೆಯನ್ನುಂಟು ಮಾಡುತ್ತಿದ್ದ ಹಿನ್ನೆಲೆಯಲ್ಲಿ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ತಂಡವನ್ನು ರಚಿಸಿ ಜಾಗೃತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ.

ಮಾರ್ಚ್ 1, 2024 ರಿಂದ ಮೇ 29, 2024 ರವರೆಗಿನ ಧಾರವಾಡ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಿಶೇಷ ಕಾರ್ಯಚರಣೆ ನಡೆಸಿ ಒಟ್ಟು 240 ಸೈಲೇನ್ಸರ್‌ಗಳನ್ನು ವಶಪರಿಸಿಕೊಳ್ಳಲಾಗಿದೆ. ಮತ್ತು ಇವುಗಳ ಮೌಲ್ಯ ಸುಮಾರು ರೂ. 12 ಲಕ್ಷಗಳಾಗಿದೆ. ದೋಷಪೂರಿತ ಕರ್ಕಶ ಸೈಲೇನ್ಸರ್‌ಗಳನ್ನು ವಶಪಡಿಸಿಕೊಂಡು ವಾಹನ ಸವಾರರಿಗೆ ತಲಾ 500 ರೂ ದಂಡ ವಿಧಿಸಿ, ವಾಹನಗಳನ್ನು ಬಿಡುಗಡೆ ಮಾಡಲಾಗಿದೆ.

ಮುಂದಿನ ದಿನಗಳಲ್ಲಿ ಯಾವುದಾದರೂ ದೋಷಪೂರಿತ ಸೈಲೇನ್ಸರ್ ಸೈಕಲ್ ಮೋಟಾರ ಕಂಡುಬಂದಲ್ಲಿ ಸಾರ್ವಜನಿಕರು ಕೂಡಲೇ ಮೋಟಾರ್ ಸೈಕಲ್ ನಂಬರ ಸಮೇತ ಫೋಟೋ, ವಿಡಿಯೋ ಮೂಲಕ ಸಂಚಾರ ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆ: 9480802037 ಗೆ ವಾಟ್ಸಪ್ ಮೂಲಕ ಕಳುಹಿಸಬಹುದು. ಮಾಹಿತಿ ನೀಡಿದವರ ವಿವರವನ್ನು ಗೌಪ್ಯವಾಗಿ ಇಡಲಾಗುವುದು ಎಂದು ಹುಬ್ಬಳ್ಳಿ–ಧಾರವಾಡ ಪೊಲೀಸ್ ಆಯುಕ್ತೆ ರೇಣುಕಾ ಸುಕುಮಾರ ಅವರು ಈ ಸಂದರ್ಭದಲ್ಲಿ ತಿಳಿಸಿದರು.

*3 ವರ್ಷಗಳ ರಸ್ತೆ ಅಪಘಾತದ ವಿವರ:* 2022 ರ ರಸ್ತೆ ಅಪಘಾತದಲ್ಲಿ 97 ಪುರುಷರು, 14 ಮಹಿಳೆಯರು ಸೇರಿ ಒಟ್ಟು 111 ಜನ ಮರಣ ಹೊಂದಿದ್ದು, 419 ಪುರುಷರು, 87 ಮಹಿಳೆಯರು ಸೇರಿ ಒಟ್ಟು 506 ಜನ ತೀವ್ರ ಗಾಯಗೊಂಡಿ–ದ್ದಾರೆ. 2023 ರ ರಸ್ತೆ ಅಪಘಾತದಲ್ಲಿ 100 ಪುರುಷರು, 17 ಮಹಿಳೆಯರು ಸೇರಿ ಒಟ್ಟು 117 ಜನ ಮರಣ ಹೊಂದಿದ್ದು, 454 ಪುರುಷರು, 105 ಮಹಿಳೆಯರು ಸೇರಿ ಒಟ್ಟು 559 ಜನ ತೀವ್ರ ಗಾಯಗೊಂಡಿ–ದ್ದಾರೆ. 2024 ರ ಜನವರಿಯಿಂದ ಇಂದಿನ ವರೆಗೆ ರಸ್ತೆ ಅಪಘಾತದಲ್ಲಿ 30 ಪುರುಷರು, 4 ಮಹಿಳೆಯರು ಸೇರಿ ಒಟ್ಟು 34 ಜನ ಮರಣ ಹೊಂದಿದ್ದು, 113 ಪುರುಷರು, 15 ಮಹಿಳೆಯರು ಸೇರಿ ಒಟ್ಟು 128 ಜನ ತೀವ್ರ ಗಾಯಗೊಂಡಿದ್ದಾರೆ ಎಂದು ಅವರು ತಿಳಿಸಿದರು.

*3 ವರ್ಷದ ಎಂ.ವಿ ಆಯಾಕ್ಟ್ ಮತ್ತು ನ್ಯಾಯಾಲದಿಂದ ಸಂಚಾರ ನಿಯಮ ಉಲ್ಲಘನೆ ಅಡಿಯಲ್ಲಿ ವಸೂಲಿ ಮಾಡಲಾದ ದಂಡದ ವಿವರ:* 2022 ರಲ್ಲಿ ಸಂಚಾರ ನಿಯಮ ಉಲ್ಲಘಿಸಿದ 1,40,416 ಅಪರಾಧಗಳು ದಾಖಲಾಗಿವೆ. 66,167,100 ರೂ.ಗಳ ದಂಡವನ್ನು ಸ್ಥಳದಲ್ಲಿಯೇ ವಸೂಲಿ ಮಾಡಲಾಗಿದ್ದು, 1,28,64,100 ರೂ.ಗಳ ದಂಡವನ್ನು ನ್ಯಾಯಾಲಯದಿಂದ ವಸೂಲಿ ಮಾಡಲಾಗಿದೆ. ಒಟ್ಟಾರೆ–ಯಾಗಿ 7,90,31,200 ರೂ.ಗಳ ದಂಡ ವಸೂಲಿ ಮಾಡಲಾಗಿದೆ. 2023 ರಲ್ಲಿ ಸಂಚಾರ ನಿಯಮ ಉಲ್ಲಘಿಸಿದ 1,91,883 ಅಪರಾಧಗಳು ದಾಖಲಾಗಿವೆ. 7,52,65,125 ರೂ.ಗಳ ದಂಡವನ್ನು ಸ್ಥಳದಲ್ಲಿಯೇ ವಸೂಲಿ ಮಾಡಲಾಗಿದ್ದು, 1,83,61,000 ರೂ.ಗಳ ದಂಡವನ್ನು ನ್ಯಾಯಾಲಯದಿಂದ ವಸೂಲಿ ಮಾಡಲಾಗಿದೆ. ಒಟ್ಟಾರೆಯಾಗಿ 9,36,26,125 ರೂ.ಗಳ ದಂಡ ವಸೂಲಿ ಮಾಡಲಾಗಿದೆ. 2024 ರ ಜನವರಿಯಿಂದ ಇಂದಿನ ವರೆಗೆ ಸಂಚಾರ ನಿಯಮ ಉಲ್ಲಘಿಸಿದ 54,468 ಅಪರಾಧಗಳು ದಾಖಲಾಗಿವೆ. 2,60,54,400 ರೂ.ಗಳ ದಂಡವನ್ನು ಸ್ಥಳದಲ್ಲಿಯೇ ವಸೂಲಿ ಮಾಡಲಾಗಿದ್ದು, 69,51,500 ರೂ.ಗಳ ದಂಡವನ್ನು ನ್ಯಾಯಾಲಯದಿಂದ ವಸೂಲಿ ಮಾಡಲಾಗಿದೆ. ಒಟ್ಟಾರೆ–ಯಾಗಿ 3,30,05,900 ರೂ.ಗಳ ದಂಡ ವಸೂಲಿ ಮಾಡಲಾಗಿದೆ ಎಂದು ಪೊಲೀಸ್ ಆಯುಕ್ತರು ತಿಳಿಸಿದರು.

ಕಾರ್ಯಕ್ರಮದಲ್ಲಿ ಉಪ ಪೊಲೀಸ್ ಆಯುಕ್ತರಾದ ಕುಶಲ್ ಚೌಕ್ಸೆ, ರವೀಶ ಸಿ.ಆರ್., ಸಂಚಾರ ಸಹಾಯಕ ಪೊಲೀಸ್ ಆಯುಕ್ತ ವಿನೋದ ಮುಕ್ತೆದಾರ, ಸಂಚಾರಿ ಪೊಲೀಸ್ ಇನಸ್ಪೆಕ್ಟರ್ ಶ್ರೀನಿವಾಸ ಮೇಟಿ, ಪಿಎಸ್‌ಐ ನಾರಾಯಣ ಪಟವರ್ಧನ, ಶೋಭಾ ಕಂಬಿ, ಸೇರಿದಂತೆ ಇತರ ಪೊಲೀಸ್ ಅಧಿಕಾರಿ, ಸಿಬ್ಬಂದಿಗಳು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಯಮಕಿಂಕರ ರೂಪಕದ ಮೂಲಕ ಸಂಚಾರ ನಿಯಮಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು.

